# ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ : 2ನೇ ಮಹಡಿ, ದೇವಾಂಗ ಮಾರ್ಕೆಟ್, ಜುಮ್ಮಾ ಮಸೀದಿ ರಸ್ತೆ, ಬೆಂಗಳೂರು – 560 002.
Tel. : 41241207, 22237655 E-mail : textilecbl@gmail.com Website : www.tcbl.co.in

## 2021-2022ನೇ ಸಾಲಿನ
## 59ನೇ ಸಾಮಾನ್ಯ ಸರ್ವಸದಸ್ಯರ ವಾರ್ಷಿಕ ಸಭೆ

**ದಿನಾಂಕ : 18-09-2022ನೇ ಭಾನುವಾರ ಬೆಳಿಗ್ಗೆ 10-30 ಘಂಟೆಗೆ**

**ಸ್ಥಳ : ಪತಿಯಪ್ಪ ಭವನದಲ್ಲಿ**

ದೇವಾಂಗ ಹಾಸ್ಟಲ್ ರಸ್ತೆ (ಕಾರ್ಪೋರೇಶನ್ ಹಿಂಭಾಗ), ಬೆಂಗಳೂರು – 560 027.

(31-03-2022 ಕ್ಕೆ ಬಂಡವಾಳ ಪ್ರಮಾಣ ಶೇ. 16.88%)

(CAPITAL ADEQUACY RATIO 16.88%)

ಸೂಚನೆ : ನಿಯಮದಂತೆ ಬ್ಯಾಂಕ್ ನೀಡಿರುವ ಗುರುತಿನ ಚೀಟಿಯನ್ನು ತಮ್ಮ ಜೊತೆಯಲ್ಲಿ ತಂದಿರುವವರಿಗೆ ಮಾತ್ರ ಮಹಾ ಸಭೆಗೆ ಪ್ರವೇಶ. ಆದ್ದರಿಂದ ಸದಸ್ಯರು ತಮ್ಮ ಹಳದಿ ಗುರುತಿನ ಚೀಟಿ (Yellow Identity Card) ಯನ್ನು ತಪ್ಪದೆ ಸಭೆಗೆ ಬರುವಾಗ ತರಬೇಕಾಗಿ ವಿನಂತಿ.

## ಸದಸ್ಯರುಗಳಿಗೆ ವಿಶೇಷ ಸೂಚನೆ

**ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯಂತೆ KYC (ಗ್ರಾಹಕರನ್ನು ಅರಿಯಿರಿ) ನಿಯಮಗಳ ಪ್ರಕಾರ ಪ್ರತಿಯೊಬ್ಬ ಸದಸ್ಯರು ಇತ್ತೀಚಿನ ತಮ್ಮ PAN ಹಾಗೂ AADHAAR ದಾಖಲಾತಿಗಳನ್ನು ನೀಡುವುದು ಕಡ್ಡಾಯವಾಗಿರುತ್ತದೆ. ಆದುದರಿಂದ ಸರ್ವಸದಸ್ಯರ ಸಭೆಗೆ ಹಾಜರಾಗುವ ವೇಳೆ ಮೇಲಿನ ದಾಖಲೆ ಪ್ರತಿಗಳನ್ನು ಕಡ್ಡಾಯವಾಗಿ ನೀಡಲು ಕೋರಿದೆ.**

**5 ವಾರ್ಷಿಕ ಸರ್ವಸದಸ್ಯರ ಸಭೆಗಳಲ್ಲಿ ಕನಿಷ್ಠ 2 ಸಭೆಗಳಿಗೆ ಹಾಜರಾತಿ ಕಡ್ಡಾಯವಾಗಿರುತ್ತದೆ.**

ಹಾಗೂ

**ಕನಿಷ್ಠ ಗಡುರೇವಣಿ ರೂ. 2,500/-**

ಅಥವಾ

**ಎರಡು ವರ್ಷದ ಮಾಸಿಕ ರೂ. 100/- ರ ಆವರ್ತ ಠೇವಣಿ**

ಅಥವಾ

**ಉಳಿತಾಯ / ಚಾಲ್ತಿ ಖಾತೆಯಲ್ಲಿ ಒಂದು ವರ್ಷದಲ್ಲಿ ಕನಿಷ್ಠ 6 ವಹಿವಾಟುಗಳು ಮತ್ತು ಖಾತೆಯಲ್ಲಿ ಕನಿಷ್ಠ ರೂ. 500/- ಧನ ಶಿಲ್ಕು ನಿರ್ವಹಣೆ**

ಅಥವಾ

**ನಿಯಮಗಳಿಗೆ ಒಳಪಟ್ಟು ರೂ. 5000/- ಸಾಲ ಪಡೆಯುವುದು ಕಡ್ಡಾಯವಾಗಿರುತ್ತದೆ.**

**ನಿಮ್ಮ ಠೇವಣಿಗಳ ಮೇಲೆ ವಾಣಿಜ್ಯ ಬ್ಯಾಂಕುಗಳು ನೀಡುವ ಬಡ್ಡಿಗಿಂತ ಹೆಚ್ಚು ಬಡ್ಡಿ ಪಡೆಯಿರಿ**

# ಟೆಕ್ಸ್‌ಟೈಲ್ ಕೋ–ಆಪರೇಟಿವ್ ಬ್ಯಾಂಕ್ ಲಿ.

## 2017–18 ರಿಂದ 2022–23 ರ ಸಾಲಿನ ನಿರ್ದೇಶಕ ಮಂಡಳಿ



ಶ್ರೀ ಕೃ.ಅಶ್ವತ್ಥನಾರಾಯಣರವರು
ಅಧ್ಯಕ್ಷರು



ಶ್ರೀಮತಿ ಹೆಚ್.ಪಾರ್ವತಿ (ರಂಗನಾಯಕಿ)ರವರು
ಉಪಾಧ್ಯಕ್ಷರು
(ದಿ : 28–02–2022 ರಿಂದ)



ಶ್ರೀ ಟಿ.ಎಸ್.ಕೃಷ್ಣಮೂರ್ತಿ (ಜರಿಕೃಷ್ಣ)ರವರು
ನಿರ್ದೇಶಕರು



ಶ್ರೀ ಆರ್.ಭಾಸ್ಕರ್ (ಗಿಣಿ)ರವರು
ನಿರ್ದೇಶಕರು



ಶ್ರೀ ಎಣ್ಣೆಗೆರೆ ಆರ್.ವೆಂಕಟರಾಮಯ್ಯ(ವೈ.ವಿ.ರಾಜು)ರವರು
ನಿರ್ದೇಶಕರು



ಶ್ರೀ ಎಸ್.ಉಮಾಶಂಕರ್‌ರವರು
ನಿರ್ದೇಶಕರು



ಶ್ರೀ ಕುಲಾವಿ ಆರ್.ಮಲ್ಲಣ್ಣರವರು
ನಿರ್ದೇಶಕರು



ಶ್ರೀ ಊರುಕೆರೆ ಜಿ.ದಯಾನಂದರವರು
ನಿರ್ದೇಶಕರು



ಶ್ರೀ ಟಿ.ಭಾಸ್ಕರ್ (ಟಿ.ಟಿ.)ರವರು
ನಿರ್ದೇಶಕರು



ಶ್ರೀ ಮಾಧವರವರು
ನಿರ್ದೇಶಕರು



ಶ್ರೀಮತಿ ಆರ್.ದೇವಕಿರವರು
ಮಹಿಳಾ ನಿರ್ದೇಶಕರು



ಶ್ರೀ ಡಿ.ಹೆಚ್.ಜಗನ್ನಾಥ್ (ದೊಮ್ಮಸಂದ್ರ)ರವರು
ಹಿಂದುಳಿದ ವರ್ಗದ ನಿರ್ದೇಶಕರು



ಶ್ರೀ ದೇವರಾಜು ಪಿ. (ಆನೇಕಲ್)ರವರು
ಹಿಂದುಳಿದ ವರ್ಗದ ನಿರ್ದೇಶಕರು



ಶ್ರೀ ಪಿ.ಎಂ.ನಾಗರಾಜುರವರು
ಪರಿಶಿಷ್ಟ ಪಂಗಡ ನಿರ್ದೇಶಕರು



ಶ್ರೀ ಜಿ.ಶಿವಕುಮಾರ್‌ರವರು
ವೃತ್ತಿಪರ ನಿರ್ದೇಶಕರು
(ಚಾರ್ಟರ್ಡ್ ಅಕೌಂಟೆಂಟ್)



ಶ್ರೀ ಎಲ್.ಕೆ.ಜಯರಾಮ್‌ರವರು
ವೃತ್ತಿಪರ ನಿರ್ದೇಶಕರು (ಬ್ಯಾಂಕಿಂಗ್ ಪರಿಣಿತರು)
(ದಿ : 25–05–2021 ರಿಂದ)



ಶ್ರೀ ಹೆಚ್. ಪಾರ್ಥಸಾರಥಿ
ಮುಖ್ಯ ಕಾರ್ಯನಿರ್ವಾಹಕರು (ಪ್ರ)

# ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿ.

ಆಡಳಿತ ಕಛೇರಿ: 2ನೇ ಮಹಡಿ, ದೇವಾಂಗ ಮಾರ್ಕೆಟ್, ಜುಮ್ಮಾ ಮಸೀದಿ ರಸ್ತೆ, ಬೆಂಗಳೂರು-560 002.

## 2021–22ನೇ ಸಾಲಿನ 59ನೇ ಸಾಮಾನ್ಯ ಸರ್ವ ಸದಸ್ಯರ ವಾರ್ಷಿಕ ಸಭೆಯ ನೋಟೀಸು.

2021–22 ನೇ ಸಾಲಿನ 59ನೇ ಸರ್ವ ಸದಸ್ಯರ ವಾರ್ಷಿಕ ಸಭೆಯನ್ನು ಬೆಂಗಳೂರು ದೇವಾಂಗ ಹಾಸ್ಟೆಲ್ ರಸ್ತೆಯಲ್ಲಿರುವ, ದೇವಾಂಗ ಸಂಘದ ಪತಿಯಪ್ಪ ಭವನದಲ್ಲಿ (ಬೆಂಗಳೂರು ಮಹಾನಗರ ಪಾಲಿಕೆ ಕಛೇರಿ ಹಿಂಭಾಗ), ದಿನಾಂಕ : 18.09.2022 ರಂದು ಭಾನುವಾರ ಬೆಳಿಗ್ಗೆ 10.30 ಘಂಟೆಗೆ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೃ. ಅಶ್ವತ್ಥನಾರಾಯಣರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ದಯಮಾಡಿಸಿ ಸಭೆಯ ಕಾರ್ಯ ಕಲಾಪಗಳನ್ನು ನಡೆಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ.

### ಕಾರ್ಯಸೂಚಿ

1. ಪ್ರಾರ್ಥನೆ.
2. ಸ್ವಾಗತ ಭಾಷಣ.
3. ಸಭೆಯ ನೋಟೀಸ್‌ನ್ನು ಓದಿ ರೆಕಾರ್ಡ್ ಮಾಡುವುದು. (ನಿ.ಮಂ.ವ.ಪು. 1)
4. 2020–21ನೇ ಸಾಲಿನ ಸರ್ವ ಸದಸ್ಯರ ಸಭೆಯ ಕಲಾಪಗಳನ್ನು ಓದಿ ಖಾಯಂ ಮಾಡುವುದು. (ಆ.ವ.ಪು.2–24)
5. 2021–22ನೇ ಸಾಲಿನ ನಿರ್ದೇಶಕ ಮಂಡಳಿ ವರದಿ ಅಂಗೀಕರಿಸುವುದು. (ನಿ.ಮ.ವ.ಪು.7–16)
6. 2021–22ನೇ ಸಾಲಿನ ಲೆಕ್ಕ ಪರಿಶೋಧನೆಯಾದ ಲೆಕ್ಕ ಪತ್ರಗಳ ಪರಿಶೀಲನೆ ಮತ್ತು ಅನುಮೋದನೆ ಹಾಗೂ ಲೆಕ್ಕ ಪರಿಶೋಧನಾ ವರದಿ ಮತ್ತು ವರದಿಗೆ ನಿರ್ದೇಶಕ ಮಂಡಳಿಯವರು ನೀಡಿರುವ ಸಮಾಧಾನಗಳನ್ನು ಪರಿಶೀಲಿಸಿ ಅಂಗೀಕರಿಸುವುದು. (ಆ.ವ.ಪು.25–112)
7. 2021–22ನೇ ಸಾಲಿನಲ್ಲಿ ಬಡ್ಜೆಟ್ ಮಂಜೂರಾತಿಗಿಂತ ಹೆಚ್ಚುವರಿ ಖರ್ಚಾಗಿರುವ ಬಾಬತ್ತಿನ ಅನುಮೋದನೆ. (ನಿ.ಮಂ.ವ.ಪು. 17)
8. 2021–22ನೇ ಸಾಲಿನ ನಿವ್ವಳ ನಫೆ ವಿಲೇವಾರಿ ಮತ್ತು ಲಾಭಾಂಶ (ಡಿವಿಡೆಂಡ್) ಘೋಷಣೆಗೆ ಮಂಜೂರಾತಿ ನೀಡುವುದು. (ನಿ.ಮಂ.ವ.ಪು. 18)
9. 2022–23ನೇ ಸಾಲಿಗೆ ಬಡ್ಜೆಟ್ ಮಂಜೂರಾತಿ ಪಟ್ಟಿಯನ್ನು ಅಂಗೀಕರಿಸುವುದು. (ನಿ.ಮಂ.ವ.ಪು. 19–20)
10. ಬ್ಯಾಂಕಿನ ಮುಂಬರುವ ವರ್ಷದ ಕಾರ್ಯ ಚಟುವಟಿಕೆಗಳ ಬಗ್ಗೆ ಆಡಳಿತ ಮಂಡಳಿಯ ರೂಪು ರೇಷೆ. (ನಿ.ಮಂ.ವ.ಪು. 20)

11. ಬ್ಯಾಂಕಿನ ಅಧಿಕೃತ ಷೇರು ಬಂಡವಾಳಕ್ಕೆ ಸಭೆಯು ನೀಡಿದ್ದ ಅನುಮತಿಯನ್ನು ಮುಂದುವರಿಸುವ ಬಗ್ಗೆ. (ನಿ.ಮಂ.ವ.ಪು. 21)

12. ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಮಾರ್ಗಸೂಚಿಯಂತೆ 2022–23ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ನೇಮಿಸಿಕೊಂಡಿರುವ ಬಗ್ಗೆ. (ನಿ.ಮಂ.ವ.ಪು. 21)

13. ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ. ಡಿ. ಸಂಜೀವಣ್ಣರವರ ವಯೋ ನಿವೃತ್ತಿಯಿಂದ ತೆರವಾದ ಮುಖ್ಯ ಕಾರ್ಯನಿರ್ವಾಹಕರ ಹುದ್ದೆಗೆ ಶ್ರೀ ಹೆಚ್. ಪಾರ್ಥಸಾರಥಿರವರನ್ನು ಪ್ರಭಾರ ಮುಖ್ಯ ಕಾರ್ಯನಿರ್ವಾಹಕರನ್ನಾಗಿ ನೇಮಕಗೊಳಿಸಿರುವ ಬಗ್ಗೆ. (ನಿ.ಮಂ.ವ.ಪು. 21)

14. ನಿರ್ದೇಶಕರುಗಳಿಗೆ ಅವರ ಹತ್ತಿರದ ಸಂಬಂಧಿಗಳಿಗೆ ಮತ್ತು ಅವರ ಹಿತಾಸಕ್ತಿ ಇರುವ ಸಂಸ್ಥೆಗಳಿಗೆ ನೀಡಿದ್ದ ಸಾಲಗಳು ಮತ್ತು ಇದರ ಸುಸ್ತಿ ಸಾಲಗಳು ಏನಾದರೂ ಇದ್ದಲ್ಲಿ ಅವುಗಳ ವಸೂಲಾತಿಗೆ ತೆಗೆದುಕೊಂಡ ಕ್ರಮಗಳ ಪರಿವೀಕ್ಷಣೆ. (ನಿ.ಮಂ.ವ.ಪು. 22)

15. ನಿರ್ದೇಶಕರು ಬ್ಯಾಂಕಿನ ಸೇವೆಗಳನ್ನು ಉಪಯೋಗಿಸಿಕೊಂಡಿರುವುದರ ಬಗ್ಗೆ ಅವಲೋಕಿಸುವುದು. (ನಿ.ಮಂ.ವ.ಪು. 22)

16. ಬ್ಯಾಂಕಿನ ಉಪನಿಯಮಗಳ ತಿದ್ದುಪಡಿ ಅನಮೋದನೆ. (ನಿ.ಮಂ.ವ.ಪು. 23)

17. ಅಧ್ಯಕ್ಷರ ಅಪ್ಪಣೆ ಮೇರೆಗೆ ಸದಸ್ಯರಿಂದ ಬರಬಹುದಾದ ನಿರ್ಣಯಗಳು ಮತ್ತು ಸೂಚಿಸಬಹುದಾದ ವಿಷಯಗಳು.

18. ವಂದನಾರ್ಪಣೆ.

**ನಿರ್ದೇಶಕ ಮಂಡಳಿ ಅಪ್ಪಣೆ ಮೇರೆಗೆ**

**ಸಹಿ/–**

**ಬೆಂಗಳೂರು**
**ತಾ: 04/07/2022**

**ಹೆಚ್. ಪಾರ್ಥಸಾರಥಿ**
ಮುಖ್ಯ ಕಾರ್ಯನಿರ್ವಾಹಕರು (ಪ್ರ).

**ಸೂಚನೆ:**

1. **ನಿ.ಮಂ.ವ.ಪು – ನಿರ್ದೇಶಕ ಮಂಡಳಿ ವರದಿ ಪುಟ ಸಂಖ್ಯೆ.**
   **ಆ.ವ.ಪು – ಆಡಿಟ್ ವರದಿ ಪುಟ ಸಂಖ್ಯೆ.**
2. **ಕಾರ್ಯಸೂಚಿ ಅನ್ವಯ ಯಾರೇ ಸದಸ್ಯರು ಸಭೆಯಲ್ಲಿ ಚರ್ಚಿಸಲು ಇಚ್ಛಿಸಿದಲ್ಲಿ ಆ ಬಗ್ಗೆ ಲಿಖಿತ ಮೂಲಕ ನಮ್ಮ ಬ್ಯಾಂಕಿನ ಪ್ರಧಾನ ಕಛೇರಿಗೆ ಮುಂಚಿತವಾಗಿ ಅಂದರೆ 7 ದಿನಗಳೊಳಗೆ ತಿಳಿಸಿ ಅವರ ಹೆಸರನ್ನು ನೊಂದಾಯಿಸಿಕೊಳ್ಳತಕ್ಕದ್ದು. ಇಂತಹ ಸೂಚನೆ ನಮ್ಮ ಕಛೇರಿಗೆ ದಿನಾಂಕ : 11.09.2022ರ ಒಳಗೆ ನೀಡತಕ್ಕದ್ದು.**
3. **ಸಭೆಯ ನೋಟಿಸ್ ಪುಸ್ತಕ ಹಾಗೂ ಆಡಿಟ್ ವರದಿ ಪುಸ್ತಕಗಳನ್ನು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ www.tcbl.co.in ನಿಂದಲೂ ಸಹ ಪಡೆಯಬಹುದಾಗಿರುತ್ತದೆ.**

## ಸದಸ್ಯರುಗಳಿಗೆ ವಿಶೇಷ ಸೂಚನೆ

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಕಾಯಿದೆ 2014 (ಅಧಿನಿಯಮ 35) ಮತ್ತು (ತಿದ್ದುಪಡಿ) ನಿಯಮ, 2015ರ ಪ್ರಕಾರ ಈ ಕೆಳಕಂಡ ಸದಸ್ಯರುಗಳಿಗೆ ಮಹಾ ಸಭೆಯ ನಡಾವಳಿಗಳಲ್ಲಿ ಪಾಲ್ಗೊಳ್ಳುವ ಮತ್ತು ಯಾವುದೇ ವಿಷಯಕ್ಕೆ ಮತ ಹಾಕುವ ಹಕ್ಕಿರುವುದಿಲ್ಲ.

1. ಸುಸ್ತಿ ಸಾಲಗಾರ ಸದಸ್ಯರುಗಳಿಗೆ.
2. ಹಿಂದಿನ ಸತತ ಐದು ವಾರ್ಷಿಕ ಸರ್ವ ಸದಸ್ಯರ ಸಭೆಗಳಲ್ಲಿ ಕನಿಷ್ಠ 2 ಸಭೆಗಳಿಗೆ ಹಾಜರಾಗದೆ ಇರುವ ಸದಸ್ಯರುಗಳಿಗೆ.
3. ಹಿಂದಿನ ವರ್ಷದಲ್ಲಿ ಕನಿಷ್ಠ ವ್ಯವಹಾರವನ್ನು ನಡೆಸಲು ಅಥವಾ ಬ್ಯಾಂಕು ನೀಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಪಡೆಯಲು ವಿಫಲರಾದ ಸದಸ್ಯರುಗಳು.

## ಸದಸ್ಯರ ಗಮನಕ್ಕೆ

1. ಬೈಲಾ ನಂ. 45ರ ಪ್ರಕಾರ ಬ್ಯಾಂಕಿಗೆ ಸಂಬಂಧಪಟ್ಟ ಬೇರಾವುದೇ ವಿಷಯದಲ್ಲಿ ಹೆಚ್ಚಿನ ಸಮಜಾಯಿಷಿ ಅಥವಾ ವಿವರಗಳು ಬೇಕೆಂದು ಬಯಸಿದರೆ ಸಂಬಂಧಪಟ್ಟ ಸುಸ್ತಿದಾರರಲ್ಲದ ಸದಸ್ಯರು ಕಡೇ ಪಕ್ಷ 7 ದಿನಗಳ ಮುಂಚೆಯಾದರೂ ಅಂದರೆ ದಿನಾಂಕ : 11.09.2022 ರೊಳಗಾಗಿ ದಯವಿಟ್ಟು ಬ್ಯಾಂಕಿಗೆ ಲಿಖಿತ ಮೂಲಕ ತಿಳಿಸತಕ್ಕದ್ದು.
2. ಷೇರು ಖಾತೆಯಲ್ಲಿ ಸಹಿ ಹಾಕದಿರುವವರು ಸಹಿ ಹಾಕತಕ್ಕದ್ದು ಮತ್ತು ನಾಮಿನೇಷನ್ ಸೂಚನೆ ಮಾಡದೇ ಇರತಕ್ಕವರು ತಮ್ಮ ಹಿತದೃಷ್ಟಿಯಿಂದ ನಾಮಿನಿಯ ಹೆಸರನ್ನು ಸೂಚಿಸತಕ್ಕದ್ದು. ಷೇರು ಸರ್ಟಿಫಿಕೇಟುಗಳನ್ನು ತೆಗೆದುಕೊಳ್ಳದೆ ಇರುವ ಸದಸ್ಯರು ದಯವಿಟ್ಟು ಕಛೇರಿಗೆ ಭೇಟಿ ನೀಡಿ ತೆಗೆದುಕೊಳ್ಳುವುದು.
3. ದಿನಾಂಕ: 27.09.1991 ರಂದು ನಡೆದ ಸರ್ವ ಸದಸ್ಯರ ಸಭೆಯಲ್ಲಿ ತೀರ್ಮಾನವಾದಂತೆ ಆಡಿಟ್ ಆದ ಲೆಕ್ಕ ಪತ್ರಗಳ ಜಮಾ–ಖರ್ಚು ತಃಖ್ತೆ, ಆಸ್ತಿ–ಜವಾಬ್ದಾರಿ ತಃಖ್ತೆ, ಲಾಭ–ನಷ್ಟದ ತಃಖ್ತೆ, ಆಡಿಟರ್‌ರವರ ವರದಿ ಹಾಗೂ ವರದಿಗೆ ನೀಡಿರುವ ಸಮಾಧಾನಗಳ ಪ್ರತಿಯನ್ನು ಇಚ್ಛಿಸುವ ಸದಸ್ಯರು ಬ್ಯಾಂಕಿನಲ್ಲೇ ದಿನಾಂಕ: 11.09.2022 ರಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.
4. ಸಭೆಗೆ ಹಾಜರಾದ ಎಲ್ಲಾ ಸದಸ್ಯರು ತಪ್ಪದೇ ಹಾಜರಿ ಪುಸ್ತಕದಲ್ಲಿ ಸಹಿ ಹಾಕತಕ್ಕದ್ದು.
5. ಗುರುತಿನ ಚೀಟಿಯನ್ನು ಪಡೆಯದಿರುವ ಸದಸ್ಯರು ತಮ್ಮ ಭಾವಚಿತ್ರವನ್ನು ಕೂಡಲೇ ಬ್ಯಾಂಕಿಗೆ ನೀಡಿ ಪಡೆಯಬಹುದು ಹಾಗೂ ಗುರುತಿನ ಚೀಟಿ ಪಡೆದಿರುವ ಸದಸ್ಯರು ವಿಳಾಸ ಬದಲಾವಣೆಯಾಗಿದ್ದರೆ ತಕ್ಷಣ ಬ್ಯಾಂಕಿಗೆ ತಿಳಿಸುವುದು.
6. ಹಿಂದಿನ ಸಾಲುಗಳ ಡಿವಿಡೆಂಡನ್ನು ಇನ್ನೂ ತೆಗೆದುಕೊಳ್ಳದೆ ಇರುವ ಸದಸ್ಯರು ದಯವಿಟ್ಟು ತೆಗೆದುಕೊಳ್ಳುವುದು. ಇಲ್ಲದಿದ್ದರೆ ಈ ಮೊದಲೇ ತಿಳಿಸಿರುವಂತೆ ಬೈಲಾ ಸಂಖ್ಯೆ 103ರ ಪ್ರಕಾರ ಪಾವತಿಯಾಗದ ಡಿವಿಡೆಂಡನ್ನು ಆಪದ್ಧನ ನಿಧಿಗೆ ವರ್ಗಾಯಿಸಲಾಗುವುದು.

7. ಸದಸ್ಯರುಗಳು ಉಳಿತಾಯ/ಚಾಲ್ತಿ ಖಾತೆಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು, ಇದು ಸಂವಿಧಾನದ ತಿದ್ದುಪಡಿ ಕಾಯಿದೆ ಪ್ರಕಾರವು ಕಡ್ಡಾಯವಾಗಿರುತ್ತದೆ. ಹಾಗೂ ತಮ್ಮ ಸದಸ್ಯತ್ವದ ಡಿವಿಡೆಂಡ್‌ನ್ನು ವರ್ಗಾಯಿಸಲು ಅನುಕೂಲವಾಗುವುದು.

8. ಬ್ಯಾಂಕಿನ ಸುವರ್ಣ ಮಹೋತ್ಸವದ ನೆನಪಿಗಾಗಿ ಸದಸ್ಯರುಗಳಿಗೆ ಬೆಳ್ಳಿ ನಾಣ್ಯವನ್ನು ಈಗಲೂ ಸಹ ನೀಡುತ್ತಿದ್ದು, ಇನ್ನೂ ಪಡೆಯದೆ ಇರುವ ಸದಸ್ಯರು ಗುರುತಿನ ಚೀಟಿಯ ನಕಲನ್ನು ನೀಡಿ ಬ್ಯಾಂಕಿನ ಮಧ್ಯಾಹ್ನದ ವ್ಯವಹಾರದ ವೇಳೆಯಲ್ಲಿ ಪಡೆದುಕೊಳ್ಳುವುದು.

9. ಸದಸ್ಯರುಗಳ ಹೆಸರಿನಲ್ಲಿರುವ ಗಡು ಠೇವಣಿ, ಮಂಗಳನಿಧಿ ಠೇವಣಿ ಹಾಗೂ ಆವರ್ತಕ ಠೇವಣಿ (Recurring) ಗಳಿಂದ ಕ್ರೋಢೀಕೃತವಾಗಿ ಗಳಿಸುವ ಬಡ್ಡಿ ಮೊತ್ತ ಒಂದು ವರ್ಷದಲ್ಲಿ ರೂ.40,000/– ಹಾಗೂ ಹಿರಿಯ ನಾಗರಿಕರು ರೂ.50,000/–ಗಳು ಅಥವಾ ಅದಕ್ಕೂ ಮೇಲ್ಪಟ್ಟು ಗಳಿಸಿದಾಗ ಕಡ್ಡಾಯವಾಗಿ ಟಿ.ಡಿ.ಎಸ್. ಕಟಾವು ದಿನಾಂಕ: 01.04.2019 ರಿಂದ ಮಾಡಬೇಕಾಗಿರುತ್ತದೆ. ಇದಕ್ಕೆ ಠೇವಣಿದಾರರ ಪಾನ್ ಸಂಖ್ಯೆ ಅಗತ್ಯವಾಗಿರುತ್ತದೆ. ಪಾನ್ ಇಲ್ಲದಿದ್ದ ಪಕ್ಷದಲ್ಲಿ ಶೇ.20 ರಂತೆ ಟಿ.ಡಿ.ಎಸ್. ಕಟಾವು ಮಾಡಬೇಕಾಗಿರುತ್ತದೆಂದು ಆದಾಯ ತೆರಿಗೆ ಇಲಾಖೆಯವರು ಆದೇಶಿಸಿರುತ್ತಾರೆ.

10. **(DEAF) ಡಿಪಾಸಿಟ್ ಎಜುಕೇಷನ್ ಅವೇರ್‌ನೆಸ್ ಫಂಡ್**

ಗ್ರಾಹಕರುಗಳು ಬ್ಯಾಂಕಿನಲ್ಲಿ ಹೊಂದಿರುವ ಯಾವುದೇ ಠೇವಣಿ ಖಾತೆಗಳಲ್ಲಿ ಅಥವಾ ವಾಯಿದೆ ಮುಗಿದು 10 ವರ್ಷಗಳ ಕಾಲ ವ್ಯವಹರಿಸದ ಖಾತೆಗಳಲ್ಲಿನ ಹಣವನ್ನು ಕಡ್ಡಾಯವಾಗಿ ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯ ಪ್ರಕಾರ ಅವರಿಗೆ ಕಳುಹಿಸಬೇಕಾಗಿರುತ್ತದೆ. ಇದಕ್ಕೆ ಅವಕಾಶ ನೀಡದಂತೆ ನಿಗಾವಹಿಸಲು ಸದಸ್ಯರುಗಳ ಗಮನಕ್ಕೆ ತರುತ್ತಿದ್ದೇವೆ.

11. ಭಾರತೀಯ ರಿಸರ್ವ್ ಬ್ಯಾಂಕಿನ ನಿಮ್ಮ ಗ್ರಾಹಕರನ್ನು ಅರಿಯಿರಿ ಎಂಬ ಸುತ್ತೋಲೆಯಲ್ಲಿ ತಿಳಿಸಿರುವಂತೆ ಬ್ಯಾಂಕಿನಲ್ಲಿ ಉಳಿತಾಯ/ಚಾಲ್ತಿ, ಇತರೇ ಖಾತೆಗಳನ್ನು ತೆರೆಯಲು ಇಚ್ಛಿಸುವ ಗ್ರಾಹಕರು ತಮ್ಮ ಪಾಸ್‌ಪೋರ್ಟ್/ಪಾನ್ ಕಾರ್ಡ್/ವಾಹನ ಚಾಲನೆ ಅನುಮತಿ ಪತ್ರ/ಚುನಾವಣೆ ಆಯೋಗದ ಗುರುತಿನ ಚೀಟಿ/ಆಧಾರ್ ಕಾರ್ಡು ಇಂತಹವುಗಳನ್ನು ಅವರ ಭಾವಚಿತ್ರದೊಂದಿಗೆ ಕಡ್ಡಾಯವಾಗಿ ನೀಡಬೇಕು. ಈ ಮಾಹಿತಿಯನ್ನು ನೀಡಿ ತಮ್ಮ ಖಾತೆಯಲ್ಲಿನ ವಿವರಗಳನ್ನು ಪೂರ್ಣಗೊಳಿಸುವುದು.

12. ಈ ಸುತ್ತೋಲೆಯಲ್ಲಿನ ಕಾಯಿದೆಯು ಈಗಾಗಲೇ ಹೊಂದಿರುವ ಹಳೆಯ ಖಾತೆದಾರರಿಗೂ ಅನ್ವಯವಾಗುತ್ತದೆ. ಆದ್ದರಿಂದ ಮೇಲ್ಕಂಡ ದಾಖಲೆಗಳಲ್ಲಿ ಯಾವುದಾದರೂ ಒಂದನ್ನು ಹಳೆಯ ಖಾತೆದಾರರೂ ಸಹ ಬ್ಯಾಂಕಿಗೆ ಸಲ್ಲಿಸಿ ತಮ್ಮ ಖಾತೆಗಳನ್ನು ಕ್ರಮಬದ್ಧಗೊಳಿಸಬೇಕಾಗಿ ಕೋರುತ್ತೇವೆ.

13. ಉಳಿತಾಯ/ಚಾಲ್ತಿ ಖಾತೆ ಹೊಂದಿರುವ ಖಾತೆದಾರರು ತಮ್ಮ ಆಧಾರ್ ಸಂಖ್ಯೆಯನ್ನು ಖಾತೆಗಳಿಗೆ ಜೋಡಣೆ ಮಾಡುವುದು ಕಡ್ಡಾಯವಾಗಿರುತ್ತದೆ. ಆದುದರಿಂದ ಜೋಡಣೆ ಮಾಡದ ಖಾತೆದಾರರು ಕೂಡಲೇ ತಮ್ಮ ಆಧಾರ್ ಸಂಖ್ಯೆಯನ್ನು ತಮ್ಮ ಖಾತೆಗಳಲ್ಲಿ ಜೋಡಣೆ ಮಾಡುವುದು.

# ಟೆಕ್ಸ್‌ಟೈಲ್ ಕೋ–ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಛೇರಿ: 2ನೇ ಮಹಡಿ, ದೇವಾಂಗ ಮಾರ್ಕೆಟ್, ಜುಮ್ಮಾ ಮಸೀದಿ ರಸ್ತೆ, ಬೆಂಗಳೂರು – 560 002.

## 2021–22ನೇ ಸಾಲಿನ ನಿರ್ದೇಶಕ ಮಂಡಳಿ ಸದಸ್ಯರು

| | | |
|---|---|---|
| 1. | ಶ್ರೀ. ಕೃ.ಅಶ್ವತ್ಥನಾರಾಯಣರವರು | ಅಧ್ಯಕ್ಷರು |
| 2. | ಶ್ರೀಮತಿ. ಹೆಚ್.ಪಾರ್ವತಿರವರು (ರಂಗನಾಯಕಿ) | ಉಪಾಧ್ಯಕ್ಷರು |
| 3. | ಶ್ರೀ. ಟಿ.ಎಸ್.ಕೃಷ್ಣಮೂರ್ತಿರವರು (ಜರಿಕೃಷ್ಣ) | ನಿರ್ದೇಶಕರು |
| 4. | ಶ್ರೀ. ಆರ್.ಭಾಸ್ಕರ್‌ರವರು (ಗಿಣಿ) | ನಿರ್ದೇಶಕರು |
| 5. | ಶ್ರೀ. ಎಣ್ಣೆಗೆರೆ ಆರ್.ವೆಂಕಟರಾಮಯ್ಯರವರು (ವೈ. ವಿ. ರಾಜು) | ನಿರ್ದೇಶಕರು |
| 6. | ಶ್ರೀ. ಎಸ್.ಉಮಾಶಂಕರ್‌ರವರು | ನಿರ್ದೇಶಕರು |
| 7. | ಶ್ರೀ. ಕುಲಾವಿ ಆರ್.ಮಲ್ಲಣ್ಣರವರು | ನಿರ್ದೇಶಕರು |
| 8. | ಶ್ರೀ. ಊರುಕೆರೆ ಜಿ.ದಯಾನಂದರವರು | ನಿರ್ದೇಶಕರು |
| 9. | ಶ್ರೀ. ಟಿ.ಭಾಸ್ಕರ್‌ರವರು (ಟಿ.ಟಿ.) | ನಿರ್ದೇಶಕರು |
| 10. | ಶ್ರೀ. ಮಾಧವರವರು | ನಿರ್ದೇಶಕರು |
| 11. | ಶ್ರೀಮತಿ ಆರ್.ದೇವಕಿರವರು | ಮಹಿಳಾ ನಿರ್ದೇಶಕರು |
| 12. | ಶ್ರೀ. ಡಿ.ಹೆಚ್.ಜಗನ್ನಾಥ್‌ರವರು (ದೊಮ್ಮಸಂದ್ರ) | ನಿರ್ದೇಶಕರು (ಹಿಂ. ವರ್ಗ) |
| 13. | ಶ್ರೀ. ಪಿ.ದೇವರಾಜುರವರು (ಅನೇಕಲ್) | ನಿರ್ದೇಶಕರು (ಹಿಂ. ವರ್ಗ) |
| 14. | ಶ್ರೀ. ಪಿ.ಎಂ.ನಾಗರಾಜುರವರು | ನಿರ್ದೇಶಕರು (ಪ.ಜಾ/ಪ.ಪಂ) |
| 15. | ಶ್ರೀ. ಜಿ.ಶಿವಕುಮಾರ್‌ರವರು (ಚಾರ್ಟರ್ಡ್ ಅಕೌಂಟೆಂಟ್) | ವೃತ್ತಿಪರ ನಿರ್ದೇಶಕರು |
| 16. | ಶ್ರೀ. ಎಲ್.ಕೆ.ಜಯರಾಮ್‌ರವರು (ಬ್ಯಾಂಕಿಂಗ್ ಪರಿಣಿತರು) | ವೃತ್ತಿಪರ ನಿರ್ದೇಶಕರು |

---

## 2021–22ನೇ ಸಾಲಿನಲ್ಲಿ ನಡೆದ ನಿರ್ದೇಶಕ ಮಂಡಳಿಯ ಒಟ್ಟು ಸಭೆಗಳು – 23

### ಹಾಜರಾತಿ ವಿವರ

| | | | |
|---|---|---|---|
| 1. | ಶ್ರೀ. ಕೃ.ಅಶ್ವತ್ಥನಾರಾಯಣರವರು | – | 23 |
| 2. | ಶ್ರೀಮತಿ. ಹೆಚ್.ಪಾರ್ವತಿರವರು (ರಂಗನಾಯಕಿ) | – | 23 |
| 3. | ಶ್ರೀ. ಟಿ.ಎಸ್.ಕೃಷ್ಣಮೂರ್ತಿರವರು (ಜರಿಕೃಷ್ಣ) | – | 23 |
| 4. | ಶ್ರೀ. ಆರ್.ಭಾಸ್ಕರ್‌ರವರು (ಗಿಣಿ) | – | 23 |
| 5. | ಶ್ರೀ. ಎಣ್ಣೆಗೆರೆ ಆರ್.ವೆಂಕಟರಾಮಯ್ಯರವರು (ವೈ. ವಿ. ರಾಜು) | – | 23 |
| 6. | ಶ್ರೀ. ಎಸ್.ಉಮಾಶಂಕರ್‌ರವರು | – | 23 |
| 7. | ಶ್ರೀ. ಕುಲಾವಿ ಆರ್.ಮಲ್ಲಣ್ಣರವರು | – | 23 |
| 8. | ಶ್ರೀ. ಊರುಕೆರೆ ಜಿ.ದಯಾನಂದರವರು | – | 23 |
| 9. | ಶ್ರೀ. ಟಿ.ಭಾಸ್ಕರ್‌ರವರು (ಟಿ.ಟಿ.) | – | 17 |
| 10. | ಶ್ರೀ. ಮಾಧವರವರು | – | 23 |
| 11. | ಶ್ರೀಮತಿ ಆರ್.ದೇವಕಿರವರು | – | 22 |
| 12. | ಶ್ರೀ. ಡಿ.ಹೆಚ್.ಜಗನ್ನಾಥ್‌ರವರು (ದೊಮ್ಮಸಂದ್ರ) | – | 22 |
| 13. | ಶ್ರೀ. ಪಿ.ದೇವರಾಜುರವರು (ಅನೇಕಲ್) | – | 23 |
| 14. | ಶ್ರೀ. ಪಿ.ಎಂ.ನಾಗರಾಜುರವರು (ಪ.ಜಾ/ಪ.ಪಂ) | – | 22 |
| 15. | ಶ್ರೀ. ಜಿ.ಶಿವಕುಮಾರ್‌ರವರು (ಚಾರ್ಟರ್ಡ್ ಅಕೌಂಟೆಂಟ್) | – | 14 |
| 16. | ಶ್ರೀ. ಎಲ್.ಕೆ.ಜಯರಾಮ್‌ರವರು (ಬ್ಯಾಂಕಿಂಗ್ ಪರಿಣಿತರು) | – | 21 |

# ಟೆಕ್ಸ್‌ಟೈಲ್ ಕೋ–ಆಪರೇಟಿವ್ ಬ್ಯಾಂಕ್ ಲಿ.,

**ಆಡಳಿತ ಕಛೇರಿ: 2ನೇ ಮಹಡಿ, ದೇವಾಂಗ ಮಾರ್ಕೆಟ್, ಜುಮ್ಮಾ ಮಸೀದಿ ರಸ್ತೆ, ಬೆಂಗಳೂರು – 560 002.**

## 2021–22ನೇ ಸಾಲಿನ ನಿರ್ವಹಣಾ ಮಂಡಳಿ ಸದಸ್ಯರು

| | | |
|---|---|---|
| 1. | ಶ್ರೀ. ಎಲ್.ಕೆ.ಜಯರಾಮ್‌ರವರು | ಅಧ್ಯಕ್ಷರು |
| 2. | ಶ್ರೀ. ಆರ್.ಭಾಸ್ಕರ್‌ರವರು | ನಿರ್ದೇಶಕರು |
| 3. | ಶ್ರೀ. ಎಸ್.ಉಮಾಶಂಕರ್‌ರವರು | ನಿರ್ದೇಶಕರು |
| 4. | ಶ್ರೀ. ಮಾಧವರವರು | ನಿರ್ದೇಶಕರು |
| 5. | ಶ್ರೀ. ಪಿ.ಎಂ.ನಾಗರಾಜುರವರು | ನಿರ್ದೇಶಕರು |
| 6. | ಶ್ರೀ. ಜಿ.ಶಿವಕುಮಾರ್‌ರವರು | ನಿರ್ದೇಶಕರು |
| 7. | ಶ್ರೀ. ಡಿ.ಗಿರೀಶ್‌ರವರು | ನಿರ್ದೇಶಕರು |
| 8. | ಶ್ರೀ. ಹೆಚ್.ಪಿ. ಉತ್ತಮ್ ಶಂಕರ್‌ರವರು | ನಿರ್ದೇಶಕರು |
| 9. | ಶ್ರೀ. ಹೆಚ್.ಗೋಪಾಲಕೃಷ್ಣರವರು | ನಿರ್ದೇಶಕರು |
| 10. | ಶ್ರೀ. ಡಾ: ಎಸ್.ಹರೀಶ್‌ರವರು | ನಿರ್ದೇಶಕರು |
| 11. | ಶ್ರೀ. ಎಂ.ಟಿ.ಲಕ್ಷ್ಮೀಕುಮಾರ್‌ರವರು | ನಿರ್ದೇಶಕರು |
| 12. | ಶ್ರೀ. ಎಂ.ಸೋಮಶೇಖರ್‌ರವರು | ನಿರ್ದೇಶಕರು |

## 2021–22ನೇ ಸಾಲಿನಲ್ಲಿ ನಡೆದ ನಿರ್ವಹಣಾ ಮಂಡಳಿಯ ಒಟ್ಟು ಸಭೆಗಳು – 2

## ಹಾಜರಾತಿ ವಿವರ

| | | | |
|---|---|---|---|
| 1. | ಶ್ರೀ. ಎಲ್.ಕೆ.ಜಯರಾಮ್‌ರವರು | – | 2 |
| 2. | ಶ್ರೀ. ಆರ್.ಭಾಸ್ಕರ್‌ರವರು | – | 1 |
| 3. | ಶ್ರೀ. ಎಸ್.ಉಮಾಶಂಕರ್‌ರವರು | – | 2 |
| 4. | ಶ್ರೀ. ಮಾಧವರವರು | – | 2 |
| 5. | ಶ್ರೀ. ಪಿ.ಎಂ.ನಾಗರಾಜುರವರು | – | 1 |
| 6. | ಶ್ರೀ. ಜಿ.ಶಿವಕುಮಾರ್‌ರವರು | – | 1 |
| 7. | ಶ್ರೀ. ಡಿ.ಗಿರೀಶ್‌ರವರು | – | 2 |
| 8. | ಶ್ರೀ. ಹೆಚ್.ಪಿ. ಉತ್ತಮ್ ಶಂಕರ್‌ರವರು | – | 2 |
| 9. | ಶ್ರೀ. ಹೆಚ್.ಗೋಪಾಲಕೃಷ್ಣರವರು | – | 2 |
| 10. | ಶ್ರೀ. ಡಾ: ಎಸ್.ಹರೀಶ್‌ರವರು | – | 2 |
| 11. | ಶ್ರೀ. ಎಂ.ಟಿ.ಲಕ್ಷ್ಮೀಕುಮಾರ್‌ರವರು | – | 2 |
| 12. | ಶ್ರೀ. ಎಂ.ಸೋಮಶೇಖರ್‌ರವರು | – | 1 |

# ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

**ಆಡಳಿತ ಕಛೇರಿ: 2ನೇ ಮಹಡಿ, ದೇವಾಂಗ ಮಾರ್ಕೆಟ್, ಜುಮ್ಮಾ ಮಸೀದಿ ರಸ್ತೆ, ಬೆಂಗಳೂರು – 560 002.**

## 2021–22ನೇ ಸಾಲಿನ ನಿರ್ದೇಶಕ ಮಂಡಳಿ ವರದಿ

ಮಾನ್ಯ ಸದಸ್ಯರೇ,

ನಮ್ಮ ಬ್ಯಾಂಕಿನ ಐವತ್ತೊಂಭತ್ತನೆಯ ವಾರ್ಷಿಕ ಸಾಮಾನ್ಯ ಸರ್ವ ಸದಸ್ಯರ ಸಭೆಗೆ ಆಗಮಿಸಿರುವ ತಮ್ಮೆಲ್ಲರನ್ನು ಬ್ಯಾಂಕಿನ ನಿರ್ದೇಶಕ ಮಂಡಳಿಯು ಹಾರ್ದಿಕವಾಗಿ ಸ್ವಾಗತಿಸುತ್ತದೆ.

ವರದಿ ಸಾಲಿನಲ್ಲಿ ಮೃತರಾದ ಈ ಕೆಳಕಂಡ ಬ್ಯಾಂಕಿನ ಸದಸ್ಯರ ಆತ್ಮಕ್ಕೆ ಶಾಂತಿ ಲಭಿಸಲೆಂದು ಹಾಗೂ ಮೃತರ ಅಗಲಿಕೆಯಿಂದಾದ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಭಗವಂತನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ಬ್ಯಾಂಕಿನ ಸದಸ್ಯರುಗಳಾದ ಕೆ.ವಿ.ನಾಗರಾಜು, ಆರ್.ಸುರೇಶ್ ಬಾಬು, ಎನ್.ರುದ್ರಸ್ವಾಮಿ, ಟಿ.ನಾರಾಯಣಸ್ವಾಮಿ, ಎಂ.ವಿಶಾಲಾಕ್ಷಮ್ಮ, ಪೊನ್ನಿಯಮ್ಮಾಳ್, ಸಿ.ಎನ್.ಗಂಗಾಧರ, ಕೆ.ಶಾಂತ, ಎಂ.ಪುಟ್ಟರಾಜು, ಎ.ರಂಗಸ್ವಾಮಿ, ಎಸ್.ವಾಸುದೇವ, ಕೆ.ಶ್ರೀನಿವಾಸಮೂರ್ತಿ, ಎಸ್.ಗೋಪಾಲ್, ಟಿ.ಕೆ.ಮಹದೇವ, ಬಿ.ಎಂ.ಪಂಚಲಿಂಗಮೂರ್ತಿ, ಪಿ.ಮೋನಿಷ, ಹೆಚ್.ಪರಮೇಶ್ವರನ್, ಜಿ.ಎಸ್.ನಾಗರಾಜ್, ಬಿ.ಜಯಲಕ್ಷ್ಮಿ, ಆರ್.ವಿ.ಜಯದೇವ, ಜೆ.ರಾಮಕೃಷ್ಣ, ರುಕ್ಮಿಣಿ, ಕೆ.ಹೆಚ್.ಪುಟ್ಟರಾಜು, ಎಸ್.ಸುರೇಶ್ ಬಾಬು, ಸಿ.ಟಿ.ಚಂದ್ರಶೇಖರ್, ಆರ್.ರೂಪರತ್ನ, ಎಸ್.ಇಂದ್ರಮ್ಮ, ಪಿ.ನಾಗರಾಜು, ಜಿ.ಚಂದ್ರಪ್ಪ, ವೇದಮೂರ್ತಿ, ಕೆ.ಗಂಗಾಧರ, ಎಸ್.ಟಿ.ಸೂರ್ಯನಾರಾಯಣ, ಎಸ್.ಅಶ್ವತ್ಥನಾರಾಯಣ, ಎಂ.ವಿಜಯ, ಜಯಲಕ್ಷ್ಮಿ, ಎನ್.ಚಂದ್ರಶೇಖರಯ್ಯ, ಸಿ.ಶಿವಸ್ವಾಮಿ, ಜಯಲಕ್ಷ್ಮಿ, ವೈ.ಉಷಾರಾಣಿ, ಎಂಪಿ.ಪಿಳ್ಳಣ್ಣ, ಎಂ.ನಂಜುಂಡೇಶ್ವರ, ಎಂ.ಡಿ.ಗಿರೀಶ್, ಆರ್.ಅನಂತರಾಜು, ಲೀಲಾ ಬಾಯಿ, ಕೆ.ಮಂಗಳ, ಹೆಚ್.ಎನ್.ಹಿರೇರಂಗಪ್ಪ, ಪಿ.ಲೀಲಾವತಿ, ವಿ.ಶಾಂತಕುಮಾರ್, ಬನಶಂಕರಪ್ಪ, ಕೆ.ಮರಿಯಪ್ಪ, ಟಿ.ರಾಮಲಿಂಗಪ್ಪ, ವಿ.ಗಾಯತ್ರಿ, ಆರ್.ಮಂಜುನಾಥ, ಆದಿ ಲಕ್ಷ್ಮಮ್ಮ, ಪುಟ್ಟ ಚೌಡಮ್ಮ, ಎನ್.ಲೀಲಾವತಿ, ಆರ್.ಹನುಮಂತಪ್ಪ, ಬಿ.ರವಿಶಂಕರ್, ಆರ್.ಶ್ರೀನಿವಾಸ, ಚಂದ್ರಮ್ಮ, ಕೆ.ನಾಗರತ್ನ, ಸಿ.ವಸಂತಕುಮಾರ್, ಪಿ.ಗಾಯತ್ರಿ, ಎಸ್.ಚಂದ್ರಶೇಖರ್, ಹೆಚ್.ವಿ.ರಾಜಣ್ಣ, ಪಿ.ಸರೋಜಮ್ಮ, ಬಿ.ಚಂದ್ರಮ್ಮ, ಎಸ್.ನಾಗರಾಜ್, ಎಂ.ಆಂಜನೇಯುಲು, ಆರ್.ಸುಮಿತ್ರ, ಎಂ.ಹಿರಣ್ಣಯ್ಯ, ಆರ್.ಶಂಕರ್, ಎಸ್.ಮಂಜುನಾಥ, ಬಿ.ಕೆ.ಹರೀಶ್, ಬಿ.ಜ್ಞಾನಮೂರ್ತಿ, ಎಸ್.ಪ್ರಕಾಶ್, ಉಮಾ, ಟಿ.ಗಂಗಾಧರಪ್ಪ, ಕೆ.ಎಲ್.ವಿಠಲ್ ಸಾ, ಪಾರ್ವತಮ್ಮ, ರಂಗನಾಯಕಿ, ಕೆ.ಬೋರಯ್ಯ, ಪಿ.ನಾರಾಯಣ, ಕೆ.ಪಿ.ಪುಟ್ಟರಾಜು, ಎಂ.ಮಂಜುನಾಥ್, ಸುನಂದ, ಆರ್.ಗೋಪಾಲ್, ಎಂ.ಕೃಷ್ಣವೇಣಿ, ವಿ.ಅನುರಾಧ, ಹನುಮಂತರಾಜು, ಡಿ.ಎಸ್.ಲಕ್ಷ್ಮಣ್, ವಿ.ಸರೋಜ, ಸರೋಜ ಬಾಯಿ, ಸಿ.ಶಾಂತಮ್ಮ, ಸಾವಿತ್ರಿ, ರತನ್‌ಚಂದ್ ಟಿ ಜೈನ್, ಪಾರ್ವತಮ್ಮ, ಎಸ್.ವಿ.ಪುಟ್ಟರಾಜು, ಎನ್.ಸದಾಶಿವ, ಮಹಾಲಕ್ಷ್ಮಿ, ಕೆ.ಎಲ್.ರಾಮಲಿಂಗಸಾ, ಕೆ.ಬಿ.ಜಯರಾಮು, ಎಸ್.ಗಂಗಾಧರಪ್ಪ, ವರಲಕ್ಷ್ಮಮ್ಮ, ಎನ್.ಲಕ್ಷ್ಮೀದೇವಿ, ವಿ.ಸರೋಜಮ್ಮ, ರಂಗಮ್ಮ, ಹೆಚ್.ಕೃಷ್ಣಮೂರ್ತಿ, ಸಾವಿತ್ರಮ್ಮ, ಆರ್.ಚಂದ್ರಮ್ಮ, ಶಾಂತರಾಜು, ಸಾವಿತ್ರಮ್ಮ, ಬಿ.ಎಸ್.ರವಿ, ಬಿ.ಜಗನ್ನಾಥ್, ವಿ.ಮೂರ್ತಿ, ಎಂ.ವಿ.ನಾರಾಯಣ ಸಾ, ಆರ್.ಗಿರಿರಾಜು, ಸರೋಜ ಬಾಯಿ, ನಾಗರತ್ನ, ಹೇಮಾವತಿ, ಚೆನ್ನಮ್ಮ, ಆರ್.ನಾಗರಾಜ್, ಎಂ.ವೆಂಕಟೇಶ್, ಆರ್.ಬಿ.ಕೃಷ್ಣಮೂರ್ತಿ, ಆರ್.ಮಂಜುನಾಥ ದೀಕ್ಷಿತ್, ಟಿ.ಮುನಿರಂಗಪ್ಪ, ಎಂ.ಮೋಹನ್, ಬಿ.ಉಮೇಶ್, ಎಂ.ಹೆಚ್.ಗುಂಡು, ದೇವರಾಜು, ಜಾನಕಮ್ಮ, ಆರ್.ಪಿಳ್ಳಯ್ಯ, ಜಿ.ರಾಮಕೃಷ್ಣ, ಎಂ.ರಂಗಧಾಮಪ್ಪ, ಕೆ.ಜಯಲಕ್ಷ್ಮಿ, ಆರ್.ಎಂ.ರಂಗಸ್ವಾಮಿ, ಕೆ.ಎನ್.ಮಹೇಶ್, ಪಾರ್ವತಮ್ಮ, ಕೆ.ರಾಜಶೇಖರ್, ಸಿ.ಲಕ್ಷ್ಮೀನಾರಾಯಣ, ಎಂ.ನಾರಾಯಣಪ್ಪ, ಕೆ.ಎಲ್.ಹರೀಶ್, ಎಂ.ಲಕ್ಷ್ಮೀನಾರಾಯಣ, ಶಾರದಮ್ಮ, ಎಸ್.ರುಕ್ಮಿಣಿ,

ಆರ್.ಮಂಜುರಾಜು, ಎಸ್.ರಾಜು, ಟಿ.ಕೃಷ್ಣಮೂರ್ತಿ, ವಿ.ಕುಮಾರ್, ವಿ.ನಾರಾಯಣಮೂರ್ತಿ, ಪಿ.ಕೋಮಲ, ಸಿ.ರಾಜು, ಆರ್.ಗಿರೀಶ್, ಎಸ್.ವಿ.ಕೃಷ್ಣ, ಎಂ.ಅಮರಾವತಿ, ಪಿ.ಬನಪ್ಪ, ಎಸ್.ನಾರಾಯಣಸ್ವಾಮಿ, ಸಿ.ನಂಜಪ್ಪ, ವಿ.ವೆಂಕಟೇಶ್, ಆರ್.ಶ್ರೀನಿವಾಸಕುಮಾರ್, ಈ.ಶ್ರೀನಿವಾಸ್, ಬಿ.ಪ್ರಸನ್ನಕುಮಾರ್, ಅನಂತ ಪದ್ಮನಾಭಯ್ಯ, ಗೋವಿಂದಪ್ಪ, ರುಕ್ಮಿಣಮ್ಮ, ಬಿ.ಶಿವಕುಮಾರ್, ಬಿ.ಎಂ.ರಾಮಕೃಷ್ಣಪ್ಪ, ಎನ್.ಜಗದೀಶ್ ಆಚಾರ್, ಎಂ.ಹನುಮಂತಪ್ಪ, ಸೂರ್ಯನಾರಾಯಣ, ಎನ್.ಎಸ್.ನಾಗರಾಜ ಗುಪ್ತ, ವಿ.ಸತ್ಯನಾರಾಯಣ, ಎಲ್.ಎ.ಅನಂತಯ್ಯ, ಲಕ್ಷ್ಮಿದೇವಮ್ಮ, ಬಿ.ಸತ್ಯನಾರಾಯಣ, ಎ.ವೆಂಕಟೇಶ್, ನಾಗರತ್ನ, ಎಂ.ಶ್ರೀನಿವಾಸ, ಶ್ರೀನಿವಾಸ, ಕೆ.ಆನಂದ್, ಬಿಳಿಗಿರಿ ರಂಗಯ್ಯ, ಪಿ.ಆದಿನಾರಾಯಣ, ಎ.ರಾಜು ಇವರುಗಳ ನಿಧನಕ್ಕೆ ಗೌರವ ಸೂಚಿಸಲು ಒಂದು ನಿಮಿಷ ಮೌನವನ್ನಾಚರಿಸಿ ಮೃತರುಗಳ ಆತ್ಮಕ್ಕೆ ಶಾಂತಿಯನ್ನು ಕೋರೋಣವೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಬ್ಯಾಂಕಿನ ವಾರ್ಷಿಕ ವರದಿ 31ನೇಯ ಮಾರ್ಚ್ 2022ಕ್ಕೆ ಅಂತ್ಯಗೊಂಡ ಆರ್ಥಿಕ ವರ್ಷದ ಶಾಸನ ಬದ್ಧ ಲೆಕ್ಕ ಪರಿಶೋಧಕರಿಂದ ಪರಿಶೋಧನೆಗೊಂಡ ಆಸ್ತಿ ಹೊಣೆ ಪಟ್ಟಿ ಹಾಗೂ ಲಾಭ–ನಷ್ಟದ ತಃಖ್ತೆಯನ್ನು ಲೆಕ್ಕ ಪರಿಶೋಧಕರ ವರದಿಯೊಂದಿಗೆ ಸನ್ಮಾನ್ಯ ಸದಸ್ಯರ ಮುಂದಿಡಲು ಇಚ್ಛಿಸುತ್ತೇವೆ.

**ಬ್ಯಾಂಕಿನ ವ್ಯವಹಾರಿಕ ನಿರ್ವಹಣೆ:**

ನಮ್ಮ ಬ್ಯಾಂಕು 2021–22ನೇ ಸಾಲಿನಲ್ಲಿ ಠೇವಣಿ ಸಂಗ್ರಹದಲ್ಲಿ ಶೇ.9.25 ರಷ್ಟು ಹೆಚ್ಚಾಗಿದೆ. ಸಾಲ ಮತ್ತು ಮುಂಗಡಗಳಲ್ಲಿ ಶೇ.–0.04 ರಷ್ಟು ಕಡಿಮೆಯಿರುತ್ತದೆ. ನಮ್ಮ ಬ್ಯಾಂಕಿನ ಪ್ರಸಕ್ತ ಸಾಲಿನ ಠೇವಣಿ ಹಾಗೂ ಸಾಲ ಮತ್ತು ಮುಂಗಡಗಳ ಅನುಪಾತ ಶೇ.54.87 ರಷ್ಟಿದೆ.

**2021–22ನೇ ಸಾಲಿನ ವಹಿವಾಟಿನ ವಿವರ.**

(ರೂ ಕೋಟಿಗಳಲ್ಲಿ)

| ವಿವರ | 31.03.2021 | 31.03.2022 | ಶೇಕಡವಾರು |
|---|---|---|---|
| ಒಟ್ಟು ಠೇವಣಿ | 316.28 | 345.53 | 9.25 |
| ಸಾಲ ಮತ್ತು ಮುಂಗಡಗಳು | 189.65 | 189.58 | –0.04 |
| ಲಾಭ | 162.60 | 390.42 | 140.11 |
| ನಿವ್ವಳ ಲಾಭ | 58.55 | 281.48 | 380.75 |
| ದುಡಿಯುವ ಬಂಡವಾಳ | 365.52 | 375.74 | 2.78 |
| ಸಿಆರ್ಎಆರ್ | ಶೇ.16.67 | ಶೇ.16.88 | 1.26 |
| ಒಟ್ಟು ಆಸ್ತಿಯ ಮೇಲಿನ ಗಳಿಕೆ | ಶೇ.9.70 | ಶೇ.9.38 | –3.30 |
| ಕಾಸ್ಟ್ ಆಫ್ ಫಂಡ್ | ಶೇ.6.54 | ಶೇ.6.21 | –5.05 |
| ಒಟ್ಟು ಸಿಬ್ಬಂದಿ | 90 | 88 | –2.22 |

**ಪ್ರಸಕ್ತ ವರ್ಷದ ಲಾಭ:**

ನಮ್ಮ ಬ್ಯಾಂಕು 2021–22ನೇ ಸಾಲಿನಲ್ಲಿ ಹೆಚ್ಚಿನ ಪ್ರಗತಿ ಸಾಧಿಸಿ ತನ್ನ ಆದಾಯವನ್ನು ವೃದ್ಧಿಸಿಕೊಂಡಿರುತ್ತದೆ. ಜನವರಿ 2019ರಿಂದ ಜಾರಿಗೆ ಬರುವಂತೆ ಸಿಬ್ಬಂದಿ ವರ್ಗದವರಿಗೆ ಕರ್ನಾಟಕ ಸರ್ಕಾರದ 6ನೇ ವೇತನ

ಆಯೋಗದ ವೇತನ ಶ್ರೇಣಿ ಜಾರಿಗೊಳಿಸಿ ಸುಮಾರು ಒಂದು ಕೋಟಿ ರೂ.ಗಳಷ್ಟು ಹೆಚ್ಚುವರಿ ಖರ್ಚನ್ನು ಭರಿಸಿದ್ದೇವೆ. ಈ ಸಂದರ್ಭದಲ್ಲಿಯೂ ಸಹ ನಮ್ಮ ಬ್ಯಾಂಕು ರೂ.281.48 ಲಕ್ಷಗಳ ನಿವ್ವಳ ಲಾಭವನ್ನು ದಾಖಲಿಸಿದೆ.

**ಲಾಭಾಂಶ :**

2021–22ನೇ ಸಾಲಿಗೆ ಸಂಬಂಧಿಸಿದಂತೆ ಲೆಕ್ಕ ಪತ್ರಗಳ ವಿವರಣೆಯನ್ನು ಸಾಮಾನ್ಯ ಸಭೆಗೆ ಈಗ ಮಂಡಿಸಿ ಒಪ್ಪಿಗೆಯನ್ನು ಪಡೆಯುತ್ತಿದ್ದೇವೆ. 2021–22ನೇ ಸಾಲಿನ ಒಟ್ಟಾರೆ ವಹಿವಾಟಿನ ವಿವರವನ್ನು ಮೇಲೆ ತಿಳಿಸಿರುವಂತೆ ನಿರ್ದೇಶಕ ಮಂಡಳಿಯಲ್ಲಿ ಸವಿಸ್ತಾರವಾದ ಚರ್ಚೆಯ ನಂತರ ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯಂತೆ ಎ.ಎಫ್.ಎಸ್. ವರ್ಗದಲ್ಲಿ ನಿರ್ವಹಿಸುವ ಹೂಡಿಕೆಗಳ ಒಟ್ಟು ಮೊತ್ತದ ಮೇಲೆ ಶೇ.5 ರಷ್ಟು ನಿಧಿಯನ್ನು ನಿವ್ವಳ ಲಾಭಾಂಶದಿಂದ ಕಾಯ್ದಿರಿಸಬೇಕಾಗಿದ್ದರಿಂದಾಗಿ ಸದರಿ ಸೂಚನೆಯನ್ನು ಪಾಲಿಸಿ IFR ನಿಧಿಗೆ ಕಾಯ್ದಿರಿಸಿದ್ದರಿಂದ ಈ ಸಾಲಿಗೆ ಉಳಿದ ಲಾಭಾಂಶದಿಂದ ನಿರ್ದೇಶಕ ಮಂಡಳಿಯು 2021–22ನೇ ಸಾಲಿಗೆ ಶೇ.9 ರಂತೆ ಲಾಭಾಂಶ ನೀಡಲು ಶಿಫಾರಸ್ಸು ಮಾಡಿರುತ್ತದೆ.

ಸಹೃದಯ ಸದಸ್ಯರು ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡು ಈ ಪ್ರಸ್ತಾವನೆಗೆ ಅನುಮೋದನೆ ನೀಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇವೆ.

**ಸದಸ್ಯತ್ವ ಮತ್ತು ಷೇರು ಬಂಡವಾಳದ ಪ್ರಗತಿಯ ನೋಟ :**

2021–22ನೇ ಸಾಲಿನಲ್ಲಿ 6.25 ಕೋಟಿಯಷ್ಟು ಷೇರು ಬಂಡವಾಳವಿದ್ದು ನಮ್ಮ ಅಧಿಕೃತ ಬಂಡವಾಳ ಬೈಲಾ ಪ್ರಕಾರ ರೂ.20.00 ಕೋಟಿಯಷ್ಟಿದ್ದು, ಬ್ಯಾಂಕಿನ ಪ್ರಗತಿ ಮತ್ತು ವ್ಯವಹಾರದ ಬೆಳವಣಿಗೆ ಗಮನಕ್ಕೆ ತೆಗೆದುಕೊಂಡು ಅಧಿಕೃತ ಬಂಡವಾಳವನ್ನು ರೂ.20.00 ಕೋಟಿಗೆ 2012–13ನೇ ಸಾಲಿನ ಸಾಮಾನ್ಯ ಸರ್ವಸದಸ್ಯರ ವಾರ್ಷಿಕ ಸಭೆಯಲ್ಲಿ ನಿಗಧಿಪಡಿಸಲಾಯಿತು. ಪ್ರಸಕ್ತ ಸಾಲಿಗೂ ಈ ನಿರ್ಣಯವನ್ನು ಜಾರಿಯಿಡಲು ತೀರ್ಮಾನಿಸಲಾಗಿ ತಮ್ಮ ಅನುಮತಿಗಾಗಿ ಮಂಡಿಸುತ್ತಿದ್ದೇವೆ.

**ಸದಸ್ಯತ್ವ :**

| ವಿವರ | | ವರ್ಷದ ಪ್ರಾರಂಭ ದಲ್ಲಿದ್ದ ಸದಸ್ಯರು | ವರದಿ ಸಾಲಿನಲ್ಲಿ ಸೇರ್ಪಡೆಯಾದ ಸದಸ್ಯರು | ವರದಿ ಸಾಲಿನಲ್ಲಿ ಸದಸ್ಯತ್ವ ಹಿಂದಕ್ಕೆ ಪಡೆದವರು | ವರದಿ ಸಾಲಿನ ಆಖೈರಿಗೆ ಇರುವ ಸದಸ್ಯರು | ಒಟ್ಟು |
|---|---|---|---|---|---|---|
| **2018–2019** | ಖಾಯಂ ಸದಸ್ಯರು | 16427 | 591 | 136 | 16882 | 19348 |
| | ಸಹ ಸದಸ್ಯರು | 2367 | 225 | 126 | 2466 | |
| **2019–2020** | ಖಾಯಂ ಸದಸ್ಯರು | 16882 | 603 | 143 | 17342 | 19933 |
| | ಸಹ ಸದಸ್ಯರು | 2466 | 196 | 71 | 2591 | |
| **2020–2021** | ಖಾಯಂ ಸದಸ್ಯರು | 17342 | 343 | 189 | 17496 | 20081 |
| | ಸಹ ಸದಸ್ಯರು | 2591 | 65 | 71 | 2585 | |
| **2021–2022** | ಖಾಯಂ ಸದಸ್ಯರು | 17496 | 237 | 207 | 17526 | 20111 |
| | ಸಹ ಸದಸ್ಯರು | 2585 | 72 | 72 | 2585 | |

**ಪಾವತಿಯಾದ ಷೇರು ಬಂಡವಾಳ :**

(ರೂ ಲಕ್ಷಗಳಲ್ಲಿ)

| ವಿವರ | | ಸಾಲು ಪ್ರಾರಂಭಕ್ಕೆ | ಸಾಲಿನಲ್ಲಿ ಸೇರ್ಪಡೆ | ಸಾಲಿನಲ್ಲಿ ವಾಪಸಾತಿ | ಸಾಲಾ ಖೈರಿಗೆ ಉಳಿಕೆ | ಒಟ್ಟು ಷೇರು ಬಂಡವಾಳ |
|---|---|---|---|---|---|---|
| **2018–2019** | ಖಾಯಂ ಸದಸ್ಯರು | 481.55 | 22.53 | 36.15 | 467.93 | 726.31 |
| | ಸಹ ಸದಸ್ಯರು | 311.50 | 9.80 | 62.92 | 258.38 | |
| **2019–2020** | ಖಾಯಂ ಸದಸ್ಯರು | 467.93 | 14.26 | 39.34 | 442.85 | 673.08 |
| | ಸಹ ಸದಸ್ಯರು | 258.38 | 1.81 | 29.96 | 230.23 | |
| **2020–2021** | ಖಾಯಂ ಸದಸ್ಯರು | 442.85 | 7.89 | 14.66 | 436.08 | 652.76 |
| | ಸಹ ಸದಸ್ಯರು | 230.23 | 0.54 | 14.10 | 216.67 | |
| **2021–2022** | ಖಾಯಂ ಸದಸ್ಯರು | 436.08 | 6.29 | 17.82 | 424.55 | 625.37 |
| | ಸಹ ಸದಸ್ಯರು | 216.67 | 0.55 | 16.40 | 200.82 | |

**ಆಪದ್ಧನ ನಿಧಿ ಮತ್ತು ಇತರೇ ನಿಧಿಗಳು :**

ನಮ್ಮ ಬ್ಯಾಂಕಿನ ಆಪದ್ಧನ ನಿಧಿ ಮತ್ತು ಇತರೇ ನಿಧಿಗಳು ವರದಿ ಸಾಲಿನ ಆರಂಭದಲ್ಲಿ ರೂ.36.80 ಕೋಟಿಗಳಿದ್ದು, ಸಾಲಾಂತ್ಯಕ್ಕೆ ರೂ.37.72 ಕೋಟಿಗಳಿಗೆ ಏರಿದ್ದು ಈ ವೃದ್ಧಿಯು ಶೇ.2.44% ರಷ್ಟಾಗಿರುತ್ತದೆ.

**ಠೇವಣಿಗಳು ಮತ್ತು ದುಡಿಯುವ ಬಂಡವಾಳ :**

ಕಳೆದ ಮೂರು ಸಾಲಿನ ಠೇವಣಿಗಳ ಮತ್ತು ದುಡಿಯುವ ಬಂಡವಾಳದ ತುಲನಾತ್ಮಕ ಅಂಕಿ ಅಂಶಗಳು ಕೆಳಕಂಡಂತಿವೆ:

**(ರೂ. ಕೋಟಿಗಳಲ್ಲಿ)**

| ವಿವರ | **31.03.2020** | **31.03.2021** | **31.03.2022** |
|---|---|---|---|
| ಠೇವಣಾತಿಗಳು | 287.96 | 316.28 | 345.53 |
| ದುಡಿಯುವ ಬಂಡವಾಳ | 333.52 | 365.52 | 375.74 |

ಬ್ಯಾಂಕು ಗಾಹಕರ ಠೇವಣಿಗಳಿಗೆ ನೀಡುವ ಬಡ್ಡಿ ದರವು ಆಕರ್ಷಕವಾಗಿದ್ದು ಎಲ್ಲಾ ವರ್ಗದ ಗ್ರಾಹಕರುಗಳಿಗೆ ಅನುಕೂಲ ಮಾಡಲಾಗಿದೆ. ಹಿರಿಯ ನಾಗರೀಕರಿಗೆ ಸಾಮಾನ್ಯ ಬಡ್ಡಿದರದ ಮೇಲೆ ಶೇ.0.50 ರಷ್ಟು ಹೆಚ್ಚಿನ ಬಡ್ಡಿ ನೀಡಲಾಗುತ್ತಿದೆ. ನೊಂದಾಯಿತ ಸಂಘ ಸಂಸ್ಥೆಗಳಿಗೆ ಸಾಮಾನ್ಯ ಬಡ್ಡಿದರದ ಮೇಲೆ ಶೇ.0.50 ರಷ್ಟು ಹೆಚ್ಚಿನ ಬಡ್ಡಿಯನ್ನು 06 ತಿಂಗಳ ಮೇಲ್ಪಟ್ಟ ಅವಧಿಯ ಠೇವಣಿಗಳಿಗೆ ನೀಡಲಾಗುತ್ತಿದೆ. **ಎಲ್ಲಾ ರೀತಿಯ ಠೇವಣಿಗಳು ವಿಮೆ ಸೌಲಭ್ಯಕ್ಕೊಳಪಟ್ಟಿರುತ್ತವೆ. ಠೇವಣಿಗಳಿಗೆ ರೂ.5.00 ಲಕ್ಷದವರೆಗೆ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚಿತ ವಿಮಾ ಕಂಪನಿ ಡಿಐಸಿಜಿಸಿಯ ಮೂಲಕ ವಿಮೆ ಭದ್ರತೆ ಮಾಡಲಾಗಿರುತ್ತದೆ.** ಸದರಿ ವಿಮೆ ಕಂತನ್ನು ಬ್ಯಾಂಕು ತನ್ನ ಸ್ವಂತ ಖರ್ಚಿನಲ್ಲಿಯೇ ಭರಿಸುತ್ತಿದೆ.

ಆದಾಯ ತೆರಿಗೆ ಇಲಾಖೆಯ ಆದೇಶದ ಪ್ರಕಾರ ಗ್ರಾಹಕರಿಗೆ ನೀಡುವ ಠೇವಣಿಗಳ ಬಡ್ಡಿಯ ಮೇಲೆ ಮೂಲದಲ್ಲಿಯೇ TDS ಕಠಾವು ಮಾಡಲಾಗುತ್ತಿದೆ.

**ಸಾಲ ಮತ್ತು ಮುಂಗಡಗಳು :**

ಬ್ಯಾಂಕು ವಿವಿಧ ಉದ್ದೇಶಗಳಿಗೆ ಸದಸ್ಯರುಗಳಿಗೆ ಸಾಲ ನೀಡಲಾಗುತ್ತಿದೆ. ಈ ಸಾಲಗಳಿಗೆ ಸಾಕಷ್ಟು ಭದ್ರತೆಯನ್ನು ಸದಸ್ಯರುಗಳಿಂದ ಪಡೆಯಲಾಗುತ್ತಿದೆ.

ಮಗ್ಗಗಳನ್ನು / ಹುರಿಮಿಷನ್ ಯಂತ್ರಗಳನ್ನು ಬ್ಯಾಂಕಿಗೆ ಈಡು ಮಾಡಿಕೊಂಡು ಸದಸ್ಯರುಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸುಲಭ ಕಂತುಗಳಲ್ಲಿ ಪಾವತಿ ಮಾಡುವಂತೆ ಸಾಲ ನೀಡಲಾಗುತ್ತಿದೆ. ಈ ಸಾಲಗಳಿಗೆ ಯಂತ್ರಗಳನ್ನಲ್ಲದೆ ಇತರೇ ಭದ್ರತೆಯನ್ನು ಪಡೆದುಕೊಳ್ಳಲಾಗುತ್ತಿದೆ.

ಸದಸ್ಯರ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಶೇಕಡ 8.50 ರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆ ಬ್ಯಾಂಕಿನಲ್ಲಿ ಲಭ್ಯವಿದ್ದು ಗರಿಷ್ಠ ಮೊತ್ತ ರೂ.5 ಲಕ್ಷದವರೆಗೂ ಸಾಲ ಪಡೆಯಬಹುದು.

ಕಳೆದ ಮೂರು ಸಾಲುಗಳ ಸಾಲ ಮತ್ತು ಮುಂಗಡಗಳ ತುಲನಾತ್ಮಕ ಅಂಕಿ ಅಂಶಗಳು :

**(ರೂ. ಕೋಟಿಗಳಲ್ಲಿ)**

| ವಿವರ | 2020 | 2021 | 2022 |
|---|---|---|---|
| ಸಾಲ ಮತ್ತು ಮುಂಗಡಗಳು | 177.99 | 189.65 | 189.58 |

**ನೇಕಾರಿಕೆಯ ಸಾಲ :**

ಶೇ.1 ಹಾಗೂ ಶೇ.3 ರ ಬಡ್ಡಿದರದಲ್ಲಿ ಬ್ಯಾಂಕಿನಿಂದ ನೀಡಲಾದ ಸಾಲಗಳಿಗೆ ವರದಿ ಸಾಲಿನಲ್ಲಿ ಸರ್ಕಾರದಿಂದ **ರೂ.61.13** ಲಕ್ಷ ಬಡ್ಡಿ ಸಹಾಯ ಧನವು ಬ್ಯಾಂಕಿಗೆ ಬರಬೇಕಾಗಿದ್ದು, ಆ ಪೈಕಿ **ರೂ.29.65** ಲಕ್ಷ ಪ್ರಸಕ್ತ ಸಾಲಿನಲ್ಲಿ ಬಂದಿದ್ದು, ಬಾಕಿ **ರೂ.31.48** ಲಕ್ಷಗಳು ಬರಬೇಕಾಗಿರುತ್ತದೆ. ಸರ್ಕಾರದ ಆದೇಶದ ನಂತರ ಶೇ.1 ಹಾಗೂ ಶೇ.3ರ ಬಡ್ಡಿದರದ ನೇಕಾರಿಕೆ ಸಾಲ ನೀಡಿಕೆಯನ್ನು ಪ್ರಸಕ್ತ ಸಾಲಿನಲ್ಲಿಯೂ ಸಹ ಮುಂದುವರೆಸಲಾಗಿರುತ್ತದೆ. ಸದರಿ ಸೌಲಭ್ಯವನ್ನು ರೇಷ್ಮೆ ಹುರಿ ಮಾಡುವವರಿಗೆ ಮತ್ತು ರೇಷ್ಮೆ ಬಣ್ಣ ಮಾಡುವಂತಹ ಸದಸ್ಯರುಗಳಿಗೂ ಸಹ ವಿಸ್ತರಿಸಲಾಗಿರುತ್ತದೆ. ಸದರಿ ಸಾಲಗಳಿಗೆ ಬ್ಯಾಂಕಿನಿಂದ ವಿಧಿಸುವ ಸೇವಾ ಶುಲ್ಕವನ್ನು ಶೇ.50 ರಷ್ಟು ಕಡಿಮೆಗೊಳಿಸಿರುತ್ತದೆ.

**ಕರ್ನಾಟಕ ಸರ್ಕಾರ ಜವಳಿ ಇಲಾಖೆಯವರು ನೇಕಾರಿಕೆಗೆ ನೀಡುವ ಸಹಾಯಧನ (Subsidy) :**

ನೇಕಾರರ ವಿವಿಧ ಸಂಘಗಳ ಪ್ರಯತ್ನದ ಫಲವಾಗಿ ಕರ್ನಾಟಕ ಸರ್ಕಾರವು ಸಣ್ಣ ಮತ್ತು ಗುಡಿ ನೇಕಾರಿಕೋದ್ಯಮದ ಪ್ರಗತಿಗಾಗಿ ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ನೇಕಾರರಿಗೆ ಎರಡು ಮಗ್ಗಗಳ ಘಟಕ ಸ್ಥಾಪಿಸಲು ಪ್ರೋತ್ಸಾಹ ನೀಡುವ ದಿಸೆಯಲ್ಲಿ ಸರ್ಕಾರವು ಒಂದು ಮಗ್ಗಕ್ಕೆ ಬೇಕಾಗುವ ವೆಚ್ಚವನ್ನು ಉಚಿತವಾಗಿ ಭರಿಸಿ ಮತ್ತೊಂದು ಮಗ್ಗಕ್ಕೆ ಸಹಕಾರಿ ಬ್ಯಾಂಕುಗಳ ಮೂಲಕ ಸಾಲದ ರೂಪವಾಗಿ ನೀಡುವ ಯೋಜನೆ, ಅದೇ ರೀತಿ ಗಣಕೀಕೃತ ಜಾಕಾರ್ಡ್ ಖರೀದಿಸಲು ಶೇ.50ರಷ್ಟು ಮೊತ್ತ ಸಹಾಯಧನ ನೀಡಿ ಉಳಿದ ಶೇ.50ರಷ್ಟು ಮೊತ್ತವನ್ನು ಸಹಕಾರ ಬ್ಯಾಂಕುಗಳ ಮೂಲಕ ಸಾಲದ ರೂಪವಾಗಿ ನೀಡುವ ಯೋಜನೆಗಳಡಿಯಲ್ಲಿ ನಮ್ಮ ಬ್ಯಾಂಕು 2021–22ನೇ ಸಾಲಿನಲ್ಲಿ ಮಗ್ಗಗಳ ಘಟಕ ಸ್ಥಾಪಿಸಲು ಮತ್ತು

ಎಲೆಕ್ಟ್ರಾನಿಕ್ ಜಕಾರ್ಡ್ ಖರೀದಿಸಲು ಒಟ್ಟು 07 ಸದಸ್ಯರಿಗೆ ರೂ. 31,50,000/– ಗಳ ಸಾಲವನ್ನು ನೀಡಲಾಗಿದ್ದು, ಹಾಗೂ 2021–22ನೇ ಸಾಲಿನಲ್ಲಿ ಸರ್ಕಾರದ ಬಡ್ಡಿ ರಿಯಾಯಿತಿ ಯೋಜನೆಯಲ್ಲಿ ಶೇ.1ರ ಬಡ್ಡಿ ದರದಲ್ಲಿ 41 ಜನ ಸದಸ್ಯರಿಗೆ ರೂ. 67,65,000/– ಗಳು ಮತ್ತು ಶೇ. 3ರ ಬಡ್ಡಿ ದರದಲ್ಲಿ 58 ಸದಸ್ಯರಿಗೆ ರೂ. 2,28,99,000/– ಗಳ ಒಟ್ಟು 99 ಸದಸ್ಯರಿಗೆ ಒಟ್ಟು ರೂ. 2,96,64,000/– ಗಳ ನೇಕಾರಿಕೆ ಸಾಲಗಳನ್ನು ಮಂಜೂರು ಮಾಡಲಾಗಿದೆ. ಇದಕ್ಕಾಗಿ ಈ ಯೋಜನೆಯಡಿ ವಿದ್ಯುತ್ ಮಗ್ಗಗಳನಲ್ಲದೆ ಇತರೇ ಭದ್ರತೆಯನ್ನು ಸಹ ಪಡೆಯಲಾಗಿದೆ.

**ಇ. ಎಂ. ಐ. ಬಡ್ಡಿದರದ ಸಾಲ ಯೋಜನೆ :**

| ಸಾಲದ ವಿಧ | ಬಡ್ಡಿ ದರ | ಸಾಲದ ಅವಧಿ |
|---|---|---|
| ಸ್ಥಿರಾಸ್ತಿ ಅಡಮಾನ ಸಾಲ – ಯಂತ್ರೋಪಕರಣ ಸಾಲ / ಇತರೇ ಉದ್ದೇಶಗಳಿಗೆ | ಶೇ.11.50 | 60/120/180 ತಿಂಗಳುಗಳು |
| ಗೃಹಸಾಲ | ಶೇ.10.50 | 180 ತಿಂಗಳುಗಳು |
| ಗೃಹಸಾಲ ಮಹಿಳೆಯರಿಗೆ | ಶೇ.10.35 | 180 ತಿಂಗಳುಗಳು |
| ವಾಹನ ಸಾಲ ದ್ವಿಚಕ್ರ | ಶೇ.11.70 | 36 ತಿಂಗಳುಗಳು |
| ವಾಹನ ಸಾಲ ನಾಲ್ಕು ಚಕ್ರ | ಶೇ.11.50 | 60 ತಿಂಗಳುಗಳು |

**ಎನ್.ಇ.ಎಫ್.ಟಿ. / ಆರ್.ಟಿ.ಜಿ.ಎಸ್. / ಎಟಿಎಂ ಸೌಲಭ್ಯ :**

ಎನ್.ಇ.ಎಫ್.ಟಿ./ಆರ್.ಟಿ.ಜಿ.ಎಸ್. ಮೂಲಕ ತಾವು ಇಚ್ಚಿಸುವಂತಹ ಇತರೇ ಬ್ಯಾಂಕುಗಳ ಖಾತೆದಾರರಿಗೆ ತಮ್ಮ ಹಣವನ್ನು ಕೂಡಲೇ ವರ್ಗಾಯಿಸುವ ಸೌಲಭ್ಯ ಹಾಗೂ ಇತರೇ ಬ್ಯಾಂಕುಗಳಿಂದ ಖಾತೆದಾರರು ತಮ್ಮ ಖಾತೆಗಳಿಗೆ ಹಣವನ್ನು ಜಮಾ ಪಡೆಯುವ ನೇರ ಸೌಲಭ್ಯವನ್ನು (HOST TO HOST SYSTEM) ಒದಗಿಸಲಾಗಿದೆ. ಈ ಸೌಲಭ್ಯಕ್ಕಾಗಿ IFSC ಕೋಡ್ ಸಂಖ್ಯೆಯನ್ನು ಎಲ್ಲಾ ಶಾಖೆಗಳಿಗೂ ಪ್ರತ್ಯೇಕವಾಗಿ ಪಡೆದುಕೊಳ್ಳಲಾಗಿರುತ್ತದೆ ಹಾಗೂ ಹೆಚ್.ಡಿ.ಎಫ್.ಸಿ. ಬ್ಯಾಂಕಿನ ಸಹಯೋಗದೊಂದಿಗೆ RUPAY Debit Card ಸೌಲಭ್ಯವನ್ನು ಉಳಿತಾಯ / ಚಾಲ್ತಿ ಖಾತೆದಾರರುಗಳಿಗೆ ಒದಗಿಸಲಾಗುತ್ತಿದ್ದು, ಸುಮಾರು 1369 ಖಾತೆದಾರರು ಡೆಬಿಟ್ ಕಾರ್ಡ್ ಸೌಲಭ್ಯ ಪಡೆದಿದ್ದು ಸೌಲಭ್ಯ ಪಡೆಯದ ಮಾನ್ಯ ಸದಸ್ಯರು / ಖಾತೆದಾರರುಗಳು ಸದರಿ ಸೇವೆಯನ್ನು ಉಪಯೋಗಿಸಿಕೊಳ್ಳಲು ಈ ಮೂಲಕ ಕೋರಿದೆ.

**ಅನುತ್ಪಾದಕ ಸಾಲಗಳು :**

ನಿರ್ದೇಶಕ ಮಂಡಳಿಯು ಅನುತ್ಪಾದಕ ಸಾಲದ ವಸೂಲಾತಿಗಾಗಿ ಕ್ರಮವಿಟ್ಟಿದ್ದು ಹಾಗೂ ಅದರ ಪ್ರಮಾಣವನ್ನು ಕಡಿಮೆಗೊಳಿಸಲು ವಸೂಲಾತಿಯ ಕ್ರಮವನ್ನು ಬಲಪಡಿಸಲು ಸೂಕ್ತ ಕ್ರಮ ಕೈಗೊಂಡಿದೆ. ಬ್ಯಾಂಕಿನ ಅನುತ್ಪಾದಕ ಸಾಲದ ವಿವರ ಇಂತಿದೆ. ಕೋವಿಡ್–19ರ ಪರಿಣಾಮ ಅನುತ್ಪಾದಕ ಸಾಲದ ಮೊತ್ತ ಹೆಚ್ಚಾಗಿರುತ್ತದೆ. ಸಾಲಗಳ ವಸೂಲಾತಿಗೆ ಹೆಚ್ಚು ಒತ್ತುಕೊಟ್ಟು ಸಾಲ ವಸೂಲಾತಿ ಉಪಸಮಿತಿ ರಚಿಸಲಾಗಿರುತ್ತದೆ. ಅವರ ಮಾರ್ಗದರ್ಶನ ಪಡೆದು ಸಾಲಗಳ ವಸೂಲಾತಿಗೆ ಕ್ರಮವಿಡಲಾಗಿದೆ.

(ರೂ ಲಕ್ಷಗಳಲ್ಲಿ)

| ವಿವರ | 2020 | 2021 | 2022 |
|---|---|---|---|
| ಅನುತ್ಪಾದಕ ಆಸ್ತಿಯ ಮೊತ್ತ | 574.27 | 944.77 | 796.34 |
| ನಿವ್ವಳ ಅನುತ್ಪಾದಕ ಆಸ್ತಿಯ ಮೊತ್ತ | –383.31 | –375.44 | –596.20 |
| ಶೇಕಡವಾರು ಅನುತ್ಪಾದಕ ಆಸ್ತಿಯ ಪ್ರಮಾಣ | 3.22% | 4.98% | 4.20% |
| ಶೇಕಡವಾರು ನಿವ್ವಳ ಅನುತ್ಪಾದಕ ಆಸ್ತಿಯ ಪ್ರಮಾಣ | –2.27% | –2.13% | –3.39% |
| ಅನುತ್ಪಾದಕ ಆಸ್ತಿಗಳಿಗೆ ಕಲ್ಪಿಸಲಾದ ಅವಕಾಶಗಳು | 957.58 | 1320.21 | 1392.58 |

**ಬ್ಯಾಂಕಿನ ಸಿಬ್ಬಂದಿಗಳ ಕ್ಷೇಮಾಭಿವೃದ್ಧಿ ಬಗ್ಗೆ :**

ಬ್ಯಾಂಕಿನ ಸಿಬ್ಬಂದಿಗಳನ್ನು ಆರೋಗ್ಯ ವಿಮೆ ಯೋಜನೆಯಲ್ಲಿ ರಿಲಯನ್ಸ್ ಜನರಲ್ ಇನ್‌ಶ್ಯೂರೆನ್ಸ್ ಪಾಲಿಸಿಗೊಳಪಡಿಸಿದ್ದು ವರದಿ ಸಾಲಿನಲ್ಲಿ ವಿಮೆಯ ಗರಿಷ್ಠ ಮಿತಿಯನ್ನು ರೂ. 1.00 ಲಕ್ಷಗಳಿಂದ ರೂ. 3.00 ಲಕ್ಷಗಳಿಗೆ ಹೆಚ್ಚಿಸಿ ಸಿಬ್ಬಂದಿಗಳಿಗೆ ಕ್ಷೇಮದ ಸೌಲಭ್ಯ ಒದಗಿಸಿದೆ.

**ಸದಸ್ಯರ ಮರಣ ಪರಿಹಾರ ನಿಧಿ :**

ಬ್ಯಾಂಕಿನ ಸದಸ್ಯರುಗಳು ಮರಣ ಹೊಂದಿದಾಗ ನೀಡುವ ಮರಣ ಪರಿಹಾರ ನಿಧಿ ಮೊತ್ತ ರೂ.8,000/– ಗಳನ್ನು ನೀಡಲಾಗುತ್ತಿರುತ್ತದೆ.

**ಟೆಕ್ಸ್‌ಟೈಲ್ ಸಹಕಾರಿ ವಿದ್ಯಾರ್ಥಿ ಮಿತ್ರ (ಬುಕ್ ಬ್ಯಾಂಕ್):**

ಬ್ಯಾಂಕಿನಿಂದ ಸದಸ್ಯರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಬೇಕಾಗಿರುವ ಪಠ್ಯ ಪುಸ್ತಕಗಳನ್ನು ಎರವಲು ಸೇವೆಯ ಅಡಿಯಲ್ಲಿ ನೀಡಲಾಗುತ್ತಿದೆ. ವರದಿ ಸಾಲಿನಲ್ಲಿ 268 ಸದಸ್ಯರ ಮಕ್ಕಳು ನಮ್ಮ ಬುಕ್ ಬ್ಯಾಂಕಿನಿಂದ ಪಠ್ಯ ಪುಸ್ತಕಗಳನ್ನು ಪಡೆದಿರುತ್ತಾರೆ. ಈ ರೀತಿ ಪಡೆದಂತಹ ಪಠ್ಯ ಪುಸ್ತಕಗಳನ್ನು ಪರೀಕ್ಷೆ ಮುಗಿದ ನಂತರ ಕೂಡಲೇ ಬ್ಯಾಂಕಿಗೆ ವಾಪಸ್ಸು ಮಾಡುವ ಎರವಲು ಸೇವೆ ಜಾರಿಯಲ್ಲಿರುತ್ತದೆ. ವಿದ್ಯಾರ್ಥಿಗಳ ಅಜ್ಜ ಅಥವಾ ಅಜ್ಜಿಯರು ಸದಸ್ಯರಾಗಿದ್ದಲ್ಲಿ ಅವರ ಮೊಮ್ಮಕ್ಕಳಿಗೂ ಸಹ ಬುಕ್ ಬ್ಯಾಂಕ್ ಸೌಲಭ್ಯವನ್ನು ನೀಡಲಾಗುತ್ತಿದೆ.

**ಕೋರ್ ಬ್ಯಾಂಕ್ ವ್ಯವಸ್ಥೆ :**

ಕೋರ್ ಬ್ಯಾಂಕಿಂಗ್ ಅಳವಡಿಕೆಯು ಸಂಪೂರ್ಣಗೊಂಡಿದ್ದು ಬ್ಯಾಂಕಿನ ಎಲ್ಲಾ ಶಾಖೆಗಳು ಕೋರ್ ತಂತ್ರಾಂಶದಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ. ABB (Any Branch Banking) ಬ್ಯಾಂಕಿಂಗ್ ಸೌಲಭ್ಯದ ಅಡಿಯಲ್ಲಿ ಎಲ್ಲಾ ಶಾಖೆಗಳು ಒಳಪಟ್ಟಿದ್ದು, ಸದರಿ ಸೌಲಭ್ಯದಲ್ಲಿ ನಮ್ಮ ಗ್ರಾಹಕರು ಯಾವುದೇ ಶಾಖೆಯಲ್ಲಾದರೂ ನಿಗಧಿಪಡಿಸಿರುವ ಮಿತಿಗೊಳಪಟ್ಟು ನಗದಿನ ವ್ಯವಹಾರದ ಶೀಘ್ರ ಸೇವೆ ಪಡೆಯಲು ಈ ಕೆಳಕಂಡ ನಿಯಮಗಳನ್ನು ಪಾಲಿಸಲು ಮಾನ್ಯ ಸದಸ್ಯರಲ್ಲಿ ಕೋರುತ್ತೇವೆ.

1. ಉಳಿತಾಯ ಖಾತೆ, ಚಾಲ್ತಿ ಖಾತೆ ಹಾಗೂ ಓ.ಡಿ. ಖಾತೆಗಳ ನಗದು ಜಮಾ, ಖರ್ಚು ವ್ಯವಹಾರಗಳಿಗೆ ಮಾತ್ರ ಅನ್ವಯಿಸುತ್ತದೆ.
2. ಚೆಕ್ಕುಗಳ ವರ್ಗಾವಣೆಯು ನಮ್ಮ ಬ್ಯಾಂಕಿನ ಶಾಖೆಗಳ ಚೆಕ್ಕುಗಳಿಗೆ ಮಾತ್ರ ಅನ್ವಯಿಸುತ್ತದೆ.
3. ನಗದು ವ್ಯವಹಾರದ ಗರಿಷ್ಟ ಮಿತಿ ರೂ.50,000/– ಮಾತ್ರ.

4. ಖಾತೆದಾರರಿಗೆ ಮಾತ್ರ ನಗದು ಪಡೆಯಲು ಅವಕಾಶವಿರುತ್ತದೆ.

ಗ್ರಾಹಕರಿಗೆ ತ್ವರಿತ ನಗದು ಪಾವತಿಗಾಗಿ ನೇರ ನಗದು ಪಾವತಿ "Teller Counter" ವ್ಯವಸ್ಥೆ ಕಲ್ಪಿಸಲಾಗಿರುತ್ತದೆ ಹಾಗೂ ಈಗಾಗಲೇ ನೊಂದಾಯಿತ ಗ್ರಾಹಕರುಗಳಿಗೆ ಎಸ್.ಎಂ.ಎಸ್. ಸೇವೆ ಒದಗಿಸಲಾಗುತ್ತಿದ್ದು, ಈವರೆಗೆ ಎಸ್.ಎಂ.ಎಸ್. ಸೇವೆ ಪಡೆಯಲು ಹೆಸರು ನೊಂದಾಯಿಸದ ಗ್ರಾಹಕರು ಅವರ ಹೆಸರನ್ನು ನೊಂದಾಯಿಸಿಕೊಂಡು ಎಸ್.ಎಂ.ಎಸ್ ಸೌಲಭ್ಯವನ್ನು ಪಡೆಯುವುದು.

**ಮಾನವ ಸಂಪನ್ಮೂಲ :**

ಪ್ರಸಕ್ತ ಬ್ಯಾಂಕೋದ್ಯಮದ ವಾತಾವರಣವು ತೀವ್ರ ಪೈಪೋಟಿಯನ್ನು ಎದುರಿಸುತ್ತಿದೆ. ಬ್ಯಾಂಕು ಗ್ರಾಹಕ ಸ್ನೇಹಿಯಾಗಿ ಅವರಿಗೆ ತೃಪ್ತಿಯಾಗುವ ಸೇವೆಗಳನ್ನು ಒದಗಿಸಲು ಮಾನವ ಸಂಪನ್ಮೂಲದ ಸಮಗ್ರ ಅಭಿವೃದ್ಧಿಯತ್ತ ಒತ್ತು ಕೊಟ್ಟು, ಅಗತ್ಯವಿರುವ ವಿವಿಧ ತರಬೇತಿಗಳನ್ನು ಸಕಾಲದಲ್ಲಿ ಅವರಿಗೆ ಒದಗಿಸಿ ಅವರು ಗ್ರಾಹಕರಿಗೆ ಉತ್ತಮ ಸೇವೆಯನ್ನು ನೀಡಲು ಹಾಗೂ ಅವರ ದಕ್ಷತೆ, ಕಾರ್ಯಕುಶಲತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹಾಗೂ ಹೆಚ್ಚಿನ ಹೊಣೆಗಾರಿಕೆಯನ್ನು ಹೊರಲು ಸ್ಫೂರ್ತಿಗೊಳ್ಳಲು ನಿರ್ದೇಶಕ ಮಂಡಳಿಯು ಶ್ರಮಿಸುತ್ತಿದೆ.

ಬ್ಯಾಂಕಿನ ಅನುಮೋದಿತ ವೃಂದ ಬಲ ಹಾಗೂ ಪ್ರಸಕ್ತವಿರುವ ಸಂಖ್ಯಾ ಬಲವು ಈ ಕೆಳಕಂಡಂತಿದೆ.

| ಕ್ರ. ಸಂ. | ಹುದ್ದೆಯ ಹೆಸರು | ಮಂಜೂರಾತಿ ರೀತ್ಯಾ | ಕಾರ್ಯನಿರತ ಸಿಬ್ಬಂದಿ |
|---|---|---|---|
| 1 | ಮುಖ್ಯಕಾರ್ಯನಿರ್ವಾಹಕರು | 01 | 01 |
| 2 | ಅನುಪಾಲನಾಧಿಕಾರಿ | 01 | 01 |
| 3 | ಶಾಖಾ ವ್ಯವಸ್ಥಾಪಕರು | 12 | 12 |
| 4 | ಈ.ಡಿ.ಪಿ ವ್ಯವಸ್ಥಾಪಕರು | 01 | 01 |
| 5 | ಲೆಕ್ಕಿಗರು | 14 | 11 |
| 6 | ಹಿರಿಯ ಸಹಾಯಕರು | 22 | 19 |
| 7 | ಕಿರಿಯ ಸಹಾಯಕರು | 26 | 24 |
| 8 | ಕಛೇರಿ ಸಹಾಯಕರು | 21 | 17 |
| 9 | ವಾಹನ ಚಾಲಕರು | 03 | 02 |
| 10 | ಶೀಘ್ರಲಿಪಿಗಾರರು | 01 | – |
| | **ಒಟ್ಟು** | **102** | **88** |

**ಮುಖ್ಯ ಕಾರ್ಯನಿರ್ವಾಹಕರನ್ನು ನೇಮಿಸಿರುವ ಬಗ್ಗೆ.**

ಮುಖ್ಯ ಕಾರ್ಯನಿರ್ವಾಹಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ. ಡಿ.ಸಂಜೀವಣ್ಣರವರು ದಿನಾಂಕ : 31.05.2022 ರಂದು ಸೇವಾ ನಿವೃತ್ತಿ ಹೊಂದಿದ್ದರಿಂದ ತೆರವಾದ ಮುಖ್ಯ ಕಾರ್ಯನಿರ್ವಾಹಕರ ಸ್ಥಾನಕ್ಕೆ ದಿನಾಂಕ : 13.05.2022 ರಂದು ನಡೆದ ನಿರ್ದೇಶಕ ಮಂಡಳಿ ಸಭೆಯಲ್ಲಿ ನೆಲಮಂಗಲ ಶಾಖೆಯಲ್ಲಿ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ

ಶ್ರೀ.ಹೆಚ್.ಪಾರ್ಥಸಾರಥಿರವರನ್ನು ನೇಮಕಗೊಳಿಸಲು ತೀರ್ಮಾನಿಸಿ, ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿಗಾಗಿ ದಿನಾಂಕ : 23.05.2022ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿಗೆ ಪತ್ರ ಬರೆಯಲಾಗಿರುತ್ತದೆ.

**ಕೃತಜ್ಞತೆಗಳು :**

ಬ್ಯಾಂಕಿನ ಯಶಸ್ಸಿಗೆ ಠೇವಣಿ ಸಂಗ್ರಹ ಹಾಗೂ ಸಾಲ ವಿತರಣೆ ಮೂಲಾಧಾರ. ನಮ್ಮ ಕೋರಿಕೆಗೆ ಮನ್ನಣೆಯಿತ್ತು ಬ್ಯಾಂಕಿನಲ್ಲಿ ಠೇವಣಿಯನ್ನು ತೊಡಗಿಸಿ ಬ್ಯಾಂಕಿನ ಅಭಿವೃದ್ಧಿಗೆ ಕಾರಣರಾದ ಎಲ್ಲಾ ಠೇವಣಿದಾರರಿಗೂ, ಗ್ರಾಹಕರಿಗೂ ಅಲ್ಲದೆ ವೇಳೆಗೆ ಸರಿಯಾಗಿ ಕಂತು ಮತ್ತು ಬಡ್ಡಿ ಪಾವತಿಸುವ ಮೂಲಕ ಸಾಲ ಮರುಪಾವತಿಸಿದ ಸದಸ್ಯರುಗಳೆಲ್ಲರಿಗೂ ನಾವು ಅಭಿನಂದನೆಯನ್ನು ಸಲ್ಲಿಸುತ್ತೇವೆ.

ಈ ಕೆಳಕಂಡ ಸಂಸ್ಥೆಗಳು ನಮ್ಮ ಬ್ಯಾಂಕಿನಲ್ಲಿ ಠೇವಣಿ ಇಟ್ಟು ಬ್ಯಾಂಕಿನ ಪುರೋಭಿವೃದ್ಧಿಗೆ ಕಾರಣರಾಗಿರುತ್ತಾರೆ. ಅವರಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇವೆ.

ಹಂಪಿ ಹೇಮಕೂಟ, ಶ್ರೀ ಗಾಯಿತ್ರಿ ಪೀಠ ಶ್ರೀ ಶ್ರೀ ಶ್ರೀ ದಯಾನಂದಪುರಿ ಮಹಾ ಸ್ವಾಮೀಜಿ, ಶ್ರೀ ಗಾಯಿತ್ರಿ ಪೀಠ ಮಹಾ ಸಂಸ್ಥಾನ, ಶ್ರೀ ಓಣಿ ಆಂಜನೇಯ ಸ್ವಾಮಿ ಟೆಂಪಲ್ ಟ್ರಸ್ಟ್, ದೇವಾಂಗ ಸಂಘ, ದೇವಾಂಗ ಯೂನಿಯನ್ ಸ್ಪೋರ್ಟ್ಸ್ ಕ್ಲಬ್, ಶ್ರೀ ಮಾರುತಿ ಗೃಹ ನಿರ್ಮಾಣ ಸೊಸೈಟಿ, ಮೈಸೂರು ಪವರ್‌ಲೂಂ ಸಿಲ್ಕ್ ಮ್ಯಾನುಫ್ಯಾಕ್ಚರರ್ಸ್ ಕೋ–ಆಪರೇಟಿವ್ ಸೊಸೈಟಿ ಲಿ., ಕರ್ನಾಟಕ ರಾಜ್ಯ ಪವರ್‌ಲೂಂ ಮಾರ್ಕೆಟಿಂಗ್ ಫೆಡರೇಷನ್, ಕೆ.ಆರ್.ಶೆಟ್ಟಿಪೇಟೆ ಮರ್ಚೆಂಟ್ಸ್ ಅಸೋಸಿಯೇಟ್ಸ್, ಶ್ರೀ ವಿನಾಯಕ ವಿದ್ಯಾಸಂಸ್ಥೆ, ಅಮರಜ್ಯೋತಿ ಲೈಬ್ರರಿ, ಮೈಸೂರು ಪ್ರಾಂತೀಯ ರೇಷ್ಮೆ ಕೈಮಗ್ಗದವರ ಸಹಕಾರ ಸಂಘ, ಬಡವರ ಬಳಗ (ಗಾಂಧಿ ಆಶ್ರಮ), ಮೈಸೂರು ರೇಷ್ಮೆ ಕೈಮಗ್ಗದವರ ಸಂಘ, ಸಮ್ಮಿಲನ (ರಿ), ಸೋಮಸಂದ್ರ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಟ್ರಸ್ಟ್, ಶ್ರೀ ಮಹಾಲಕ್ಷ್ಮೀ ಟೆಂಪಲ್ ಟ್ರಸ್ಟ್, ಮುದ್ದಪ್ಪ ಬಿ.ವಿ. ವೆಂಕಟಮ್ಮ ಮುದ್ದಪ್ಪ ಸೇವಾ ಸಮಿತಿ, ಕಾಮನಗುಡಿ ಚ್ಯಾರಿಟೀಸ್, ಆಂಧ್ರ ದೇವಾಂಗ ಸಂಘ, ಮೆ:ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಕೋ–ಆಪರೇಟಿವ್ ಸೊಸೈಟಿ, ಶ್ರೀ ಜೀವ್ಹೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ., ಶ್ರೀ ಜೀವ್ಹೇಶ್ವರ ವಿದ್ಯಾಭಿವೃದ್ಧಿ ಟ್ರಸ್ಟ್, ತೊಗಟವೀರ ಸಂಘ, ಗಾಯಿತ್ರಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ, ಶ್ರೀ ವೀರಶೈವ ಸಧರ್ಮ ವರ್ಧಿನಿ ಸಂಘ, ಶ್ರೀ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದ ನ್ಯಾಸ, ಶ್ರೀ ಸಿದ್ದೇಶ್ವರ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ, ಶ್ರೀ ಚೌಡೇಶ್ವರಿ ಚಾರಿಟೆಬಲ್ ಟ್ರಸ್ಟ್–ಲಕ್ಕಸಂದ್ರ, ಶ್ರೀ ಕೋದಂಡರಾಮ ಟೆಂಪಲ್ ಟ್ರಸ್ಟ್–ಪ್ರಕಾಶನಗರ, ನವಜ್ಯೋತಿ ಕನ್ನಡ ಕಲಾ ಸಂಘ–ಆನೇಕಲ್, ಶಾರದಾ ಸೇವಾಶ್ರಮ–ದೊಡ್ಡಬಳ್ಳಾಪುರ, ದಿ ಮೈಸೂರ್ ಸಿಲ್ಕ್ ಹ್ಯಾಂಡ್ ಲೂಂ ವೀವರ್ಸ್ ಅಸೋಸಿಯೇಷನ್ ಹಾಗೂ ಬ್ಯಾಂಕಿನ ಕಾರ್ಯನಿರ್ವಹಣೆಗಾಗಿ ಮತ್ತು ದಿನನಿತ್ಯದ ವ್ಯವಹಾರವು ಸುಗಮವಾಗಿ ಸಾಗಲು ಸಹಕರಿಸಿದ ಹೆಚ್.ಡಿ.ಎಫ್.ಸಿ. ಬ್ಯಾಂಕ್, ಕೋಟಕ್ ಮಹೀಂದ್ರ ಬ್ಯಾಂಕ್, ಐ.ಡಿ.ಬಿ.ಐ. ಬ್ಯಾಂಕ್, ಇಂಡಸ್‌ಇಂದ್ ಬ್ಯಾಂಕ್, ಐ.ಸಿ.ಐ.ಸಿ.ಐ. ಬ್ಯಾಂಕು, ಪಂಜಾಬ್ ನ್ಯಾಷನಲ್ ಬ್ಯಾಂಕ್, ಅಪೆಕ್ಸ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ (ವಿಜಯ ಬ್ಯಾಂಕ್)–ಗೊಟ್ಟಿಗೆರೆ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸೆಂಟ್ ಮಾರ್ಕ್ಸ್ ರಸ್ತೆ ಮತ್ತು ಆನೇಕಲ್, ಕೆನರಾ ಬ್ಯಾಂಕ್ (ಸಿಂಡಿಕೇಟ್ ಬ್ಯಾಂಕ್) ಆನೇಕಲ್, ಆಕ್ಸಿಸ್ ಬ್ಯಾಂಕ್‌ಗಳ ಅಧಿಕಾರಿಗಳಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ಕಾಲಕಾಲಕ್ಕೆ ಸೂಕ್ತ ನಿರ್ದೇಶನ ಹಾಗೂ ಮಾರ್ಗದರ್ಶನ ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳಿಗೆ ನಾವು ಅಭಾರಿಯಾಗಿದ್ದೇವೆ. ಕಾಲಕಾಲಕ್ಕೆ ಸೂಕ್ತ ಮಾರ್ಗದರ್ಶನ ಮತ್ತು ಸಲಹೆ ನೀಡುತ್ತಿರುವ ಸಹಕಾರ ಇಲಾಖೆಯ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಪುಂಡಲೀಕ ಎನ್.ಕೆರೂರ್ ಹಾಗೂ ಬ್ಯಾಂಕಿಂಗ್ ಸಲಹೆಗಾರರಾದ

ಶ್ರೀ ಸುಧಾಕರ ಭಟ್‌ರವರು ಬ್ಯಾಂಕಿನ ಅಭಿವೃದ್ಧಿಗೆ ಉಪಯುಕ್ತ ಸಲಹೆಗಳನ್ನು ನೀಡಿರುತ್ತಾರೆ, ಸಿಬಿಎಸ್ ತಂತ್ರಾಂಶ ಸೇವೆ ಒದಗಿಸುತ್ತಿರುವ ಮೆ॥ ಇನ್ಫ್ರಾಸಾಫ್ಟ್ ಸಂಸ್ಥೆ ಇವರುಗಳಿಗೂ ಸಹ ನಮ್ಮ ಕೃತಜ್ಞತೆಗಳು.

2021–22ನೇ ಸಾಲಿನ ಲೆಕ್ಕ ಪತ್ರಗಳನ್ನು ಪರಿಶೀಲಿಸಿದ ಸನ್ನದು ಲೆಕ್ಕ ಪರಿಶೋಧಕರಾದ ಮೆ: ಆಕಾಸಂ ಅಂಡ್ ಅಸೋಸಿಯೇಟ್ಸ್ ರವರಿಗೆ ನಾವು ವಂದಿಸುತ್ತೇವೆ.

ಬ್ಯಾಂಕಿನ ಪುರೋಭಿವೃದ್ಧಿಗಾಗಿ ಸೇವೆ ಸಲ್ಲಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೂ ನಾವು ವಂದಿಸುತ್ತೇವೆ.

ಕೊನೆಯದಾಗಿ ಬ್ಯಾಂಕಿನ ಸದಸ್ಯರುಗಳು ಶಿಸ್ತು ಕಾಪಾಡಿಕೊಂಡು ಬ್ಯಾಂಕಿನ ನಿರ್ದೇಶಕ ಮಂಡಳಿಯೊಂದಿಗೆ ಮಧುರ ಸಂಬಂಧ ಇಟ್ಟುಕೊಂಡು ಬ್ಯಾಂಕಿನ ಸಂಪನ್ಮೂಲಗಳನ್ನು ಗಣನೀಯವಾಗಿ ಹೆಚ್ಚಿಸಲು ಸಹಕಾರ ನೀಡಿದ್ದಕ್ಕಾಗಿ ತಮಗೆಲ್ಲಾ ವಂದನೆಯನ್ನು ಅರ್ಪಿಸುತ್ತಿದ್ದೇವೆ.

**ನಿರ್ದೇಶಕ ಮಂಡಳಿ ಅಪ್ಪಣೆ ಮೇರೆಗೆ,**
**ಸಹಿ/–**
**ಹೆಚ್. ಪಾರ್ಥಸಾರಥಿ**
**ಮುಖ್ಯ ಕಾರ್ಯನಿರ್ವಾಹಕರು (ಪ್ರ).**

**ವಿಷಯ 7: 2021–22ನೇ ಸಾಲಿಗೆ ಬಡ್ಜೆಟ್ ಮಂಜೂರಾತಿಗಿಂತ ಹೆಚ್ಚುವರಿ ಖರ್ಚಾಗಿರುವ ಬಾಬತ್ತಿನ ಅನುಮೋದನೆ.**

| ಕ್ರಮ ಸಂಖ್ಯೆ | ವಿವರ | 2021–22ಕ್ಕೆ ಮಂಜೂರಾದದ್ದು ರೂ. ಪೈ. | 2021–22ಕ್ಕೆ ಖರ್ಚಾದದ್ದು ರೂ. ಪೈ. | ಹೆಚ್ಚುವರಿ ರೂ. ಪೈ. |
|---|---|---|---|---|
| 1 | ಬಾಡಿಗೆ, ತೆರಿಗೆ, ವಿದ್ಯುತ್‌ಚ್ಛಕ್ತಿ, ಇತರೇ | 75,00,000.00 | 76,81,032.96 | 1,81,032.96 |
| 2 | ಇತರೇ ಖರ್ಚು | 8,00,000.00 | 8,28,634.00 | 28,634.00 |
| 3 | ವಿಮೆ ಕಂತು (ಬ್ಯಾಂಕು ಪಾಲಿಸಿ ಮತ್ತು ಠೇವಣಿ) | 75,00,000.00 | 78,19,581.51 | 3,19,581.51 |
| 4 | ಕಲ್ಪತರು ಏಜೆಂಟರ ಕಮಿಷನ್ | 10,00,000.00 | 10,39,034.00 | 39,034.00 |
| 5 | ವಾಹನ ರಿಪೇರಿ, ನಿರ್ವಹಣೆ | 4,00,000.00 | 5,79,552.00 | 1,79,552.00 |
| 6 | ಗಣಕ ಯಂತ್ರಗಳ ನಿರ್ವಹಣೆ | 2,00,000.00 | 3,39,964.00 | 1,39,964.00 |
| 7 | ಇತರೇ ಯಂತ್ರಗಳ ನಿರ್ವಹಣೆ | 4,00,000.00 | 4,57,479.55 | 57,479.55 |

1. ಶಾಖೆಗಳ ಬಾಡಿಗೆ ಕರಾರು ಅವಧಿ ಮುಗಿದಿದ್ದು, ಹೊಸದಾಗಿ ನವೀಕರಣ ಗೊಳಿಸಿದ್ದರಿಂದ ಹಾಗೂ ಯಲಹಂಕ ಶಾಖೆಯನ್ನು ಬೇರೊಂದು ಸ್ಥಳಕ್ಕೆ ಸ್ಥಳಾಂತರಗೊಳಿಸಿದ್ದರಿಂದ ಹಾಗೂ ಹೊಸ ಸ್ಥಳಕ್ಕೆ ಬಾಡಿಗೆ ನೀಡಿದ್ದರಿಂದ ಹೆಚ್ಚು ಖರ್ಚಾಗಿರುತ್ತದೆ.
2. ರಜಾ ದಿನಗಳಲ್ಲಿ ಸಿಬ್ಬಂದಿಗಳು ಬ್ಯಾಂಕಿನಲ್ಲಿ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸಿದ ಸಂದರ್ಭದಲ್ಲಿ ಅವರುಗಳಿಗೆ ಊಟ ತಿಂಡಿ ವ್ಯವಸ್ಥೆ ಮಾಡಿದ್ದರಿಂದ ಹೆಚ್ಚುವರಿ ಖರ್ಚಾಗಿರುತ್ತದೆ.
3. ಸಿಬ್ಬಂದಿ ಹಾಗೂ ಅವರ ಕುಟುಂಬ ವರ್ಗದವರಿಗೆ ನೀಡಲಾಗುತ್ತಿದ್ದ ಆರೋಗ್ಯ ವಿಮೆಯ ಗರಿಷ್ಠ ಮಿತಿಯನ್ನು ರೂ.1.00 ಲಕ್ಷಗಳಿಂದ ರೂ.3.00 ಲಕ್ಷಗಳಿಗೆ ಏರಿಕೆ ಮಾಡಿದ್ದರಿಂದ ಹೆಚ್ಚುವರಿ ಖರ್ಚಾಗಿರುತ್ತದೆ.
4. 2021–22ನೇ ಸಾಲಿನಲ್ಲಿ ಕಲ್ಪತರು ಠೇವಣಿ ಸಂಗ್ರಹಕಾರರು ಹೆಚ್ಚು ಠೇವಣಿ ಸಂಗ್ರಹಿಸಿದ್ದರಿಂದ ಹೆಚ್ಚು ಕಮಿಷನ್ ನೀಡಲಾಗಿರುತ್ತದೆ.
5. 2021–22ನೇ ಸಾಲಿನಲ್ಲಿ ಸಾಲ ವಸೂಲಾತಿ ಹಾಗೂ ಇತರೇ ಕಾರ್ಯಗಳಿಗೆ ಬ್ಯಾಂಕಿನ ಮೂರು ವಾಹನಗಳನ್ನು ಬಳಸಿದ್ದರಿಂದ ಹೆಚ್ಚು ಖರ್ಚಾಗಿರುತ್ತದೆ.
6. ಆಡಳಿತ ಕಛೇರಿ ಹಾಗೂ ಶಾಖೆಗಳಲ್ಲಿ ಸ್ವಂತ Firewall ಗಳನ್ನು ಅಳವಡಿಸಿಕೊಂಡಿದ್ದು, ಅದರ ವಾರ್ಷಿಕ ನಿರ್ವಹಣೆಗಾಗಿ Hardware AMC ನೀಡಿದ್ದರಿಂದ ಹೆಚ್ಚು ಖರ್ಚಾಗಿರುತ್ತದೆ.
7. ಆಡಳಿತ ಕಛೇರಿಯಲ್ಲಿನ ಜನರೇಟರ್ ಯಂತ್ರಕ್ಕೆ By Pass Change Over ಯಂತ್ರವನ್ನು ಸ್ಥಾಪಿಸಿದ್ದರಿಂದ ಹಾಗೂ CCTV/DVR/Bio-metric ಮರುಸ್ಥಾಪನೆಗೊಳಿಸಿದ್ದರಿಂದ ಹೆಚ್ಚುವರಿ ಖರ್ಚಾಗಿರುತ್ತದೆ.

**ವಿಷಯ 8: 2021–22ನೇ ಸಾಲಿನ ನಫೆ ವಿಲೇವಾರಿ ಮತ್ತು ಲಾಭಾಂಶ (ಡಿವಿಡೆಂಡ್) ಘೋಷಣೆಗೆ ಮಂಜೂರಾತಿ ನೀಡುವುದು.**

| ಕ್ರ. ಸಂ. | ವಿವರ | ರೂ. ಪೈ. | ರೂ. ಪೈ. |
|---|---|---|---|
| | 2021–22 ನೇ ಸಾಲಿನ ನಿವ್ವಳ ಲಾಭ | | **2,81,48,205.68** |
| 1 | ಆಪದ್ಧನ ನಿಧಿಗೆ ಶೇಕಡ 25% | 70,37,051.42 | **2,11,11,154.26** |
| 2 | ಸಹಕಾರ ವಿದ್ಯಾಭ್ಯಾಸ ನಿಧಿ ಶೇಕಡ 2% | 4,22,223.09 | **2,06,88,931.17** |
| 3 | ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಅಭಿವೃದ್ಧಿ ಕಾರ್ಯಕ್ಕೆ ಶೇಕಡ 1% | 2,06,889.31 | **2,04,82,041.86** |
| 4 | ಹೂಡಿಕೆಗಳ ಮೇಲಿನ ಏರಿಳಿತ ನಿಧಿ ** | 85,00,000.00 | **1,19,82,041.86** |
| 5 | ಸದಸ್ಯರ ಮರಣ ಪರಿಹಾರ ನಿಧಿ | 20,00,000.00 | **99,82,041.86** |
| 6 | ವಿದ್ಯಾರ್ಥಿಗಳ ಪ್ರೋತ್ಸಾಹ ನಿಧಿ | 8,00,000.00 | **91,82,041.86** |
| 7 | ಧರ್ಮದ ನಿಧಿ | 2,00,000.00 | **89,82,041.86** |
| 8 | ಷೇರು ಡಿವಿಡೆಂಡ್ ಶೇಕಡ 9% | 57,62,542.00 | **32,19,499.86** |
| 9 | ಸಿಬ್ಬಂದಿಗಳ ಗಳಿಕೆ ರಜೆ ನಿಗಧೀಕರಣ ನಿಧಿ | 30,00,000.00 | **2,19,499.86** |
| | ಉಳಿಕೆ ಮೊತ್ತ ಆಪದ್ಧನ ನಿಧಿಗೆ | 2,19,499.86 | |
| | **ಒಟ್ಟು** | **2,81,48,205.68** | |

** As per RBI directives, provisions made for IFR and same will be credited to IFR on approval of Profit & Loss Appropriation in the forthcoming AGM.

**ವಿಷಯ 9: 2022–23ನೇ ಸಾಲಿಗೆ ಬಡ್ಜೆಟ್ ಮಂಜೂರಾತಿ ಪಟ್ಟಿಯನ್ನು ಅಂಗೀಕರಿಸುವುದು.**

| ಕ್ರ. ಸಂ. | ವಿವರ | 2021–22ನೇ ಸಾಲಿಗೆ ಶಿಫಾರಸ್ಸು | 2021–22ನೇ ಸಾಲಿಗೆ ತಗುಲಿದ ವೆಚ್ಚ | 2022–23ನೇ ಸಾಲಿಗೆ ಶಿಫಾರಸ್ಸು |
|---|---|---|---|---|
| 1 | ಠೇವಣಿಗಳ ಮತ್ತು ಸಾಲಗಳ ಮೇಲಿನ ಬಡ್ಡಿ | 19,99,00,000.00 | 19,79,65,001.00 | 22,82,10,000.00 |
| 2 | ಸಿಬ್ಬಂದಿ ಸಂಬಳ ಪಿಎಫ್ ವಗೈರೆ | 6,00,00,000.00 | 5,64,03,952.00 | 5,80,00,000.00 |
| 3 | ಅಂಚೆ, ತಂತಿ, ದೂರವಾಣಿ | 6,00,000.00 | 3,65,149.15 | 5,00,000.00 |
| 4 | ಬಾಡಿಗೆ, ತೆರಿಗೆ, ವಿದ್ಯುಚ್ಛಕ್ತಿ, ಇತರೇ | 75,00,000.00 | 76,81,032.96 | 80,00,000.00 |
| 5 | ಲೇಖನ ಸಾಮಗ್ರಿ ಮತ್ತು ಮುದ್ರಣ | 8,00,000.00 | 7,97,512.19 | 10,00,000.00 |
| 6 | ನಿರ್ದೇಶಕರ ಸಭೆ ಖರ್ಚು | 2,00,000.00 | 1,30,908.00 | 2,50,000.00 |
| 7 | ಸಮಾರಂಭ | 5,00,000.00 | 1,86,262.00 | 10,00,000.00 |
| 8 | ಇತರೇ ಖರ್ಚು | 8,00,000.00 | 8,28,634.00 | 10,00,000.00 |
| 9 | ಸರ್ವಸದಸ್ಯರ ಸಭೆ ಖರ್ಚು ಮತ್ತು ಚುನಾವಣಾ ವೆಚ್ಚ | 35,00,000.00 | 8,44,915.00 | 35,00,000.00 |
| 10 | ಜಾಹೀರಾತು | 6,00,000.00 | 2,38,316.00 | 5,00,000.00 |
| 11 | ವಿಮೆ ಕಂತು (ಬ್ಯಾಂಕು ಪಾಲಿಸಿ ಮತ್ತು ಠೇವಣಿ) | 75,00,000.00 | 78,19,581.51 | 85,00,000.00 |
| 12 | ಸಾರಿಗೆ ವೆಚ್ಚ / ತರಬೇತಿ / ಪ್ರಯಾಣ | 8,00,000.00 | 4,79,155.00 | 14,00,000.00 |
| 13 | ಸಂಘ ಸಂಸ್ಥೆಗಳ ನೊಂದಣಿ ಮತ್ತು ವಾರ್ಷಿಕ ಶುಲ್ಕ | 3,00,000.00 | 1,56,220.00 | 2,00,000.00 |
| 14 | ಕಾನೂನು ವೆಚ್ಚ | 6,00,000.00 | 3,61,761.00 | 13,00,000.00 |
| 15 | ಮರಮುಟ್ಟುಗಳು, ವಾಹನ, ಗಣಕಯಂತ್ರ ಇಳುವರಿ | 30,00,000.00 | 21,14,130.00 | 20,00,000.00 |
| 16 | ಕಲ್ಪತರು ಏಜೆಂಟರ ಕಮೀಷನ್ | 10,00,000.00 | 10,39,034.00 | 12,00,000.00 |
| 17 | ವಾಹನ ರಿಪೇರಿ, ನಿರ್ವಹಣೆ | 4,00,000.00 | 5,79,552.00 | 7,00,000.00 |
| 18 | ನಿರ್ದೇಶಕರ ಸಭಾ ಭತ್ಯೆ | 11,00,000.00 | 8,19,000.00 | 14,00,000.00 |
| 19 | ಗಣಕಯಂತ್ರಗಳ ನಿರ್ವಹಣೆ | 2,00,000.00 | 3,39,964.00 | 5,00,000.00 |
| 20 | ಇತರೇ ಯಂತ್ರಗಳ ನಿರ್ವಹಣೆ | 4,00,000.00 | 4,57,479.55 | 6,50,000.00 |
| 21 | ಸಾಫ್ಟ್‌ವೇರ್ ಖರ್ಚು | 60,00,000.00 | 34,19,946.94 | 40,00,000.00 |
| 22 | ಸಿಬ್ಬಂದಿ ಗ್ರಾಚುಯಿಟಿ | 65,00,000.00 | 0 | 17,00,000.00 |
| 23 | ಸಮವರ್ತಿ ಲೆಕ್ಕ ಮತ್ತು ಎಡಿಪಿ ಶುಲ್ಕ ಅಂತರಿಕ ಲೆಕ್ಕ, 15ಜಿ & ಹೆಚ್ | 14,00,000.00 | 12,87,180.00 | 14,00,000.00 |
| 24 | ಲೆಖ್ಖ ಪರಿಶೋಧನಾ ಶುಲ್ಕ | 10,00,000.00 | 9,75,600.00 | 10,00,000.00 |
| 25 | ಕಛೇರಿ ನಿರ್ವಹಣೆ / ಪಾಲನೆ | 55,00,000.00 | 50,82,746.44 | 55,00,000.00 |
| 26 | ಎಂ.ಐ.ಸಿ.ಆರ್. ಖರ್ಚು | 5,00,000.00 | 2,90,695.36 | 5,00,000.00 |
| 27 | ಡಿಜಿಟಲ್ ಸಹಿ ಖರ್ಚು | 30,000.00 | 12,608.48 | 30,000.00 |
| 28 | ಸಾಲಗಳ ಮೇಲಿನ ಬಡ್ಡಿ ರಿಯಾಯಿತಿ | 15,00,000.00 | 9,91,680.00 | 20,00,000.00 |
| | **ಒಟ್ಟು** | **31,21,30,000.00** | **29,16,68,016.58** | **33,59,40,000.00** |

**2022–23ನೇ ಸಾಲಿಗೆ ನಿರೀಕ್ಷಿಸುವ ಅಂದಾಜು ವರಮಾನ**

| ಕ್ರಮ ಸಂಖ್ಯೆ | ವಿವರ | 2021–22ಕ್ಕೆ ಬಂದಿರುವ ವರಮಾನ | 2022–23ನೇ ಸಾಲಿನಲ್ಲಿ ನಿರೀಕ್ಷಣೆ |
|---|---|---|---|
| 1 | ಸಾಲಗಳ ಮೇಲಿನ ಬಡ್ಡಿ | 23,67,20,000.00 | 23,15,57,000.00 |
| 2 | ಹೂಡಿಕೆಗಳ ಮೇಲೆ ಬಡ್ಡಿ | 9,50,00,000.00 | 11,00,00,000.00 |
| 3 | ಕಮೀಷನ್ ವಗೈರೆ | 70,00,000.00 | 65,00,000.00 |
| 4 | ಇತರೇ | 5,00,000.00 | 10,00,000.00 |
| | ಜುಮ್ಲಾ | **33,92,20,000.00** | **34,90,57,000.00** |

| | | |
|---|---|---|
| 1 | 2022–23 ನೇ ಸಾಲಿಗೆ ನಿರೀಕ್ಷಿಸುವ ಅಂದಾಜು ವರಮಾನ | **34,90,57,000.00** |
| 2 | 2022–23 ನೇ ಸಾಲಿಗೆ ನಿಯಮಾನುಸಾರ ಈ ಕೆಳಕಂಡಂತೆ ಕಾದಿರಿಸುವುದು | |
| | ಹೂಡಿಕೆಗಳ ಮೇಲೆ ಕಾಯ್ದಿರಿಸುವುದು | 8,00,000.00 |
| | | **34,82,57,000.00** |
| 3 | 2022–23 ನೇ ಸಾಲಿಗೆ ಅಂದಾಜು ಖರ್ಚು | 33,59,40,000.00 |
| | | 1,23,17,000.00 |
| 4 | ವರಮಾನ ತೆರಿಗೆ | 31,56,305.00 |
| **5** | **2022–23 ನೇ ಸಾಲಿಗೆ ನಿರೀಕ್ಷಿಸುವ ನಿವ್ವಳ ಲಾಭ/ನಷ್ಟ** | **91,60,695.00** |

**ವಿಷಯ 10: ಬ್ಯಾಂಕಿನ ಮುಂಬರುವ ವರ್ಷದ ಕಾರ್ಯಚಟುವಟಿಕೆಗಳ ಬಗ್ಗೆ ಆಡಳಿತ ಮಂಡಳಿಯ ರೂಪು ರೇಷೆ:**

**2022–23ರ ವಾರ್ಷಿಕ ಸಾಲಿಗೆ ನಮ್ಮ ನಿರ್ದೇಶಕರ ಮಂಡಳಿಯು ಕೆಳಕಂಡ ಗುರಿಗಳನ್ನು ಹೊಂದಿರುತ್ತದೆ.**

1. ಬಾಂಕಿನ ಒಟ್ಟಾರೆ ಠೇವಣಿ ಸಂಗ್ರಹದ ಗುರಿ ರೂ. 355.00 ಕೋಟಿಗಳು
2. ಬ್ಯಾಂಕಿನ ಒಟ್ಟಾರೆ ಸಾಲ ಮುಂಗಡಗಳ ಗುರಿ ರೂ. 210.00 ಕೋಟಿಗಳು
3. ಸದಸ್ಯರ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳು ಉದಾಹರಣೆಗೆ ಬುಕ್ ಬ್ಯಾಂಕ್ ಸೇವೆಯನ್ನು ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರವನ್ನು ಹೆಚ್ಚು ಹೆಚ್ಚು ನೀಡಲು ಕ್ರಮವಿಡುವುದು.
4. ಬ್ಯಾಂಕು ಸ್ವಂತ ಕಟ್ಟಡಗಳನ್ನು ಹೊಂದುವ ಗುರಿ ಇಟ್ಟುಕೊಂಡಿದ್ದು ಅದೇ ಪ್ರಕಾರವಾಗಿ ಆನೇಕಲ್‌ನಲ್ಲಿ ಬ್ಯಾಂಕು ಹೊಂದಿರುವ ನಿವೇಶನದಲ್ಲಿ ಕಟ್ಟಡ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು 2022–23ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.
5. ಸರ್ಕಾರದ ಆದೇಶದ ಮೇರೆಗೆ ಶೇ.1 ಹಾಗೂ ಶೇ.3 ರ ಬಡ್ಡಿದರದ ನೇಕಾರಿಕೆ ಸಾಲಗಳನ್ನು ಮುಂದುವರೆಸುವುದು.
6. ಆಯಾ ಶಾಖಾ ಸ್ಥಳಗಳಲ್ಲಿಯೇ ಸದಸ್ಯರುಗಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸುವುದು
7. ರುಪೇ ಡೆಬಿಟ್ ಕಾರ್ಡಿನ ಮುಖಾಂತರ ಎ.ಟಿ.ಎಂ. ಸೌಲಭ್ಯ ಒದಗಿಸಿದ್ದು, UPI ಸೇವೆಗಳನ್ನು ಒದಗಿಸುವುದು.
8. ನೇಕಾರ ಸದಸ್ಯರುಗಳಿಗೆ ಸರ್ಕಾರದ ಅನುದಾನಗಳನ್ನು ತ್ವರಿತವಾಗಿ ಒದಗಿಸುವುದು.
9. ಪಾಸಿಟೀವ್ ಪೇ ಸಿಸ್ಟಮ್ ಅನ್ನು ಅಳವಡಿಸಿಕೊಳ್ಳುವುದು.

**ವಿಷಯ 11: ಬ್ಯಾಂಕಿನ ಅಧಿಕೃತ ಷೇರು ಬಂಡವಾಳಕ್ಕೆ ಸಭೆಯು ನೀಡಿದ್ದ ಅನುಮತಿಯನ್ನು ಮುಂದುವರಿಸುವ ಬಗ್ಗೆ.**

ಹಿಂದಿನ ಸರ್ವಸದಸ್ಯರ ಸಭೆಯಲ್ಲಿ ಅಧಿಕೃತ ಷೇರು ಬಂಡವಾಳವನ್ನು ರೂ.20.00 ಕೋಟಿಗೆ ಅನುಮೋದನೆ ಪಡೆಯಲಾಗಿದ್ದು, ಪ್ರಸಕ್ತ ಸಾಲಿಗೆ ಅದನ್ನು ಮುಂದುವರೆಸಿಕೊಂಡು ಹೋಗಲು ಆಡಳಿತ ಮಂಡಳಿ ಶಿಫಾರಸ್ಸು ಮಾಡಿ ಸರ್ವಸದಸ್ಯರ ಅನುಮೋದನೆ ಕೋರಲಾಗಿದೆ.

**ವಿಷಯ 12: ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಮಾರ್ಗಸೂಚಿಯಂತೆ 2022-23ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ನೇಮಿಸಿಕೊಂಡಿರುವ ಬಗ್ಗೆ.**

ಬ್ಯಾಂಕಿಂಗ್ ರೆಗ್ಯೂಲೇಷನ್ ಕಾಯಿದೆಯ ತಿದ್ದುಪಡಿಯಂತೆ ಶಾಸನ ಬದ್ಧ ಲೆಕ್ಕಪರಿಶೋಧಕರನ್ನು ನೇಮಿಸುವ ಅಧಿಕಾರ ಆರ್.ಬಿ.ಐ ಗೆ ಬಂದ ನಂತರ ಈ ಸಂಬಂಧ ಭಾರತೀಯ ರಿಸರ್ವ್ ಬ್ಯಾಂಕ್ ಹೊರಡಿಸಿರುವ ಸುತ್ತೋಲೆ ಸಂಖ್ಯೆ:ಆರ್.ಬಿ.ಐ/2021-22/25ಡಿ.ಓ.ಎಸ್.ಸಿ.ಓ.ಎ.ಆರ್.ಜಿ/ಎಸ್.ಇ.ಸಿ.01/08.91.001/2021-22ದಿ:27.04.2021 ರನ್ವಯ ರೂ.1000.00 ಕೋಟಿವರೆಗೆ ಠೇವಣಿ ಹೊಂದಿರುವ ಬ್ಯಾಂಕುಗಳು ಲೆಕ್ಕಪರಿಶೋಧನೆಯನ್ನು ಪಾಲುದಾರಿಕೆ ಲೆಕ್ಕಪರಿಶೋಧನಾ ಸಂಸ್ಥೆಗಳಿಗೆ ನೀಡಬೇಕೆಂದು, ಸದರಿ ಸಂಸ್ಥೆಯಲ್ಲಿ ಇಬ್ಬರು ಪೂರ್ಣಾವಧಿಯ ಪಾಲುದಾರರಾಗಿರಬೇಕು. ಕನಿಷ್ಠ 03 ವರ್ಷದ ಅವಧಿವರೆಗಾದರೂ ಚಾರ್ಟರ್ಡ್ ಅಕೌಂಟೆಂಟ್ ಆಗಿದ್ದು, ಸದರಿ ಸಂಸ್ಥೆಯು ಸರ್ಕಾರದ ಆಡಿಟ್ ಎಂಪ್ಯಾನೆಲ್‌ಮೆಂಟ್‌ನಲ್ಲಿ ನೊಂದಣಿಯಾಗಿರಬೇಕು. ಈ ಎಲ್ಲಾ ಅರ್ಹತೆಗಳನ್ನು ಹೊಂದಿರುವ ಇಬ್ಬರು ಲೆಕ್ಕಪರಿಶೋಧಕರಿಂದ ಒಪ್ಪಿಗೆ ಪತ್ರ ಪಡೆದು ಕಾರ್ಯಕಾರಿ ಮಂಡಳಿಯ ಶಿಫಾರಸ್ಸಿನೊಂದಿಗೆ ಭಾರತೀಯ ರಿಸರ್ವ್ ಬ್ಯಾಂಕಿಗೆ ಸಲ್ಲಿಸಬೇಕಿರುತ್ತದೆ.

ಆರ್.ಬಿ.ಐ ಸುತ್ತೋಲೆಯ ನಿಯಮಗಳ ಪ್ರಕಾರ ಈ ಎಲ್ಲಾ ಅರ್ಹತೆಗಳನ್ನು ಹೊಂದಿರುವ ಮೆ:ಆಕಾಸಂ ಅಂಡ್ ಅಸೋಸಿಯೇಟ್ಸ್ ರವರನ್ನು 2022-23ನೇ ಸಾಲಿಗೆ ಬ್ಯಾಂಕಿನ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ಮರು ನೇಮಿಸಲು ಹಾಗೂ ಲೆಕ್ಕಪರಿಶೋಧಕರ ಸಂಭಾವನೆಯನ್ನು ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿ ಅನ್ವಯ ನಿಗದಿಪಡಿಸಲು ದಿನಾಂಕ : 04.07.2022ರ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಿ, ಭಾರತೀಯ ರಿಸರ್ವ್ ಬ್ಯಾಂಕಿಗೆ ಶಿಫಾರಸ್ಸನ್ನು ಸಲ್ಲಿಸಲಾಗಿ ದಿನಾಂಕ 03.08.2022ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕು ಶಾಸನಬದ್ಧ ಲೆಕ್ಕ ಪರಿಶೋಧಕರ ನೇಮಕಾತಿಗೆ ಪೂರ್ವಾನುಮತಿ ನೀಡಿರುತ್ತದೆ.

**ವಿಷಯ 13: ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ. ಡಿ. ಸಂಜೀವಣ್ಣರವರ ವಯೋ ನಿವೃತ್ತಿಯಿಂದ ತೆರವಾದ ಮುಖ್ಯ ಕಾರ್ಯನಿರ್ವಾಹಕರ ಹುದ್ದೆಗೆ ಶ್ರೀ. ಹೆಚ್. ಪಾರ್ಥಸಾರಥಿ ರವರನ್ನು ಪ್ರಭಾರ ಮುಖ್ಯ ಕಾರ್ಯನಿರ್ವಾಹಕರನ್ನಾಗಿ ನೇಮಕಗೊಳಿಸಿರುವ ಬಗ್ಗೆ.**

ಮುಖ್ಯ ಕಾರ್ಯನಿರ್ವಾಹಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ. ಡಿ. ಸಂಜೀವಣ್ಣರವರು ದಿನಾಂಕ : 31.05.2022 ರಂದು ಸೇವಾ ನಿವೃತ್ತಿ ಹೊಂದಿದ್ದರಿಂದ ತೆರವಾದ ಮುಖ್ಯ ಕಾರ್ಯನಿರ್ವಾಹಕರ ಸ್ಥಾನಕ್ಕೆ ದಿನಾಂಕ : 13.05.2022 ರಂದು ನಡೆದ ನಿರ್ದೇಶಕ ಮಂಡಳಿ ಸಭೆಯಲ್ಲಿ ನೆಲಮಂಗಲ ಶಾಖೆಯಲ್ಲಿ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ.ಹೆಚ್.ಪಾರ್ಥಸಾರಥಿರವರನ್ನು ನೇಮಕಗೊಳಿಸಲು ತೀರ್ಮಾನಿಸಿ, ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿಗಾಗಿ ದಿನಾಂಕ : 23.05.2022ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿಗೆ ಪತ್ರ ಬರೆಯಲಾಗಿರುತ್ತದೆ.

**ವಿಷಯ 14: ಬ್ಯಾಂಕಿನ ನಿರ್ದೇಶಕರುಗಳಿಗೆ, ಅವರ ಹತ್ತಿರದ ಸಂಬಂಧಿಗಳಿಗೆ ಮತ್ತು ಅವರ ಹಿತಾಸಕ್ತಿ ಇರುವ ಸಂಸ್ಥೆಗಳಿಗೆ ನೀಡಿದ್ದ ಸಾಲಗಳು ಮತ್ತು ಇದರ ಸುಸ್ತಿ ಸಾಲಗಳು ಏನಾದರು ಇದ್ದಲ್ಲಿ ಅವುಗಳ ವಸೂಲಾತಿಗೆ ತೆಗೆದುಕೊಂಡ ಕ್ರಮಗಳ ಪರಿವೀಕ್ಷಣೆ.**

ಪ್ರಸಕ್ತ ಸಾಲಿನಲ್ಲಿ ಚುನಾಯಿತರಾದ ನಿರ್ದೇಶಕರುಗಳಿಗಾಗಲಿ, ಅವರ ಹತ್ತಿರದ ಸಂಬಂಧಿಕರುಗಳಿಗಾಗಲಿ ಅಥವಾ ಅವರ ಹಿತಾಸಕ್ತಿ ಇರುವ ಸಂಸ್ಥೆಗಳಿಗಾಗಲೀ ಯಾವುದೇ ರೀತಿಯ ಸಾಲವನ್ನು (ರಿಸರ್ವ್ ಬ್ಯಾಂಕಿನ ಸುತ್ತೋಲೆಯಂತೆ) ಮಂಜೂರು ಮಾಡಿರುವುದಿಲ್ಲ. ದಿ:25.07.2018ರಂದು ಹೊಸ ನಿರ್ದೇಶಕ ಮಂಡಳಿಯು ಅಸ್ಥಿತ್ವಕ್ಕೆ ಬಂದಿದ್ದು, ಹಾಲಿ ನಿರ್ದೇಶಕ ಮಂಡಳಿಯಲ್ಲಿರುವ ನಿರ್ದೇಶಕರಾದ ಶ್ರೀ. ಪಿ.ದೇವರಾಜುರವರ ಸಹೋದರರಾದ ಶ್ರೀ. ಪಿ.ಶಂಕರ್ ಹಾಗೂ ಶ್ರೀ. ಪಿ.ಶಂಕರ್‌ರವರ ಪತ್ನಿ ಶ್ರೀಮತಿ. ಗಿರಿಜಾರವರುಗಳು ತಲಾ ರೂ.8.00 ಲಕ್ಷಗಳಂತೆ ದಿನಾಂಕ : 20.02.2018 ರಂದು ಸಾಲ ಪಡೆದಿದ್ದು, ಸದರಿ ಸಾಲದ ಖಾತೆಗಳು ದಿನಾಂಕ : 31.03.2022ಕ್ಕೆ ಕ್ರಮವಾಗಿ ಅಸಲು ರೂ.5,15,319/– ಮತ್ತು ರೂ.5,19,917/– ಗಳು ಬಾಕಿ ಇದ್ದು, ರೂ.8,098/– ಮತ್ತು ರೂ.12,529/– ಗಳು ಸುಸ್ತಿಯಾಗಿರುತ್ತದೆ. ದಿನಾಂಕ 30.07.2022ರಲ್ಲಿ ಸುಸ್ತಿ ಮೊತ್ತವನ್ನು ಸಂಪೂರ್ಣವಾಗಿ ಮರುಪಾವತಿಸಿರುತ್ತಾರೆ.

**ವಿಷಯ 15: ನಿರ್ದೇಶಕರು ಬ್ಯಾಂಕಿನ ಸೇವೆಗಳನ್ನು ಉಪಯೋಗಿಸಿಕೊಂಡಿರುವುದರ ಬಗ್ಗೆ ಅವಲೋಕಿಸುವುದು.**

ಪ್ರಸಕ್ತ ಸಾಲಿನ ಆಡಳಿತ ಮಂಡಳಿಯ ನಿರ್ದೇಶಕರು ಬ್ಯಾಂಕಿನ ವಿವಿಧ ಸೇವೆಗಳಾದ ಉಳಿತಾಯ/ರೆಕರಿಂಗ್/ನಿಶ್ಚಿತ ಅವಧಿ ಠೇವಣಿ ಖಾತೆಗಳನ್ನು ಹೊಂದಿರುತ್ತಾರೆ.

ವಿಷಯ 14: ಬ್ಯಾಂಕಿನ ಉಪನಿಯಮಗಳ ತಿದ್ದುಪಡಿ ಅನುಮೋದನೆ

# ಟೆಕ್ಸ್‌ಟೈಲ್ ಕೋ ಆಪರೇಟಿವ್ ಬ್ಯಾಂಕ್ ಲಿ.

## ಬ್ಯಾಂಕಿನ ಉಪನಿಯಮಗಳ ತಿದ್ದುಪಡಿಗಳು

**ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು ಹಾಲಿ ಇರುವ ಬ್ಯಾಂಕಿನ ಉಪನಿಯಮಗಳಿಗೆ ಮಾಡಬೇಕಾದ ತಿದ್ದಪಡಿಗಳು.**

| ಕ್ರಮ ಸಂಖ್ಯೆ | ಅಧ್ಯಾಯ/ ಬೈಲಾ ಸಂಖ್ಯೆ | ಹಾಲಿ ಇರುವ ನಿಯಮ | ತಿದ್ದುಪಡಿಸಿದ ನಿಯಮ | ತಿದ್ದಪಡಿಗೆ ಕಾರಣ |
|---|---|---|---|---|
| 1 | ಅಧ್ಯಾಯ 10 **65.26** **(ಅ)** | **ನಿರ್ದೇಶಕ ಮಂಡಳಿ**<br>**ಉಪಸಮಿತಿಗಳ ರಚನೆ :**<br>ಆಡಳಿತ ಮಂಡಳಿಯ ಅನುಕೂಲಕ್ಕಾಗಿ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಆದೇಶಿಸಿದಂತೆ ಅಧ್ಯಕ್ಷರನ್ನೊಳಗೊಂಡ ಐದು ನಿರ್ದೇಶಕರಿಗೆ ಹೆಚ್ಚಿಲ್ಲದ ಉಪಸಮಿತಿಗಳನ್ನು ಯಾವುದೇ ನಿರ್ದಿಷ್ಟ ಕಾರ್ಯಗಳನ್ನು ನಡೆಸಲು ನೇಮಿಸುವುದು. ಮುಖ್ಯ ಕಾರ್ಯನಿರ್ವಾಹಕರು ಈ ಸಭೆಗಳನ್ನು ಕರೆಯುವವರಾಗಿರುತ್ತಾರೆ ಮತ್ತು ಈ ಸಭೆಗಳ ಅಧ್ಯಕ್ಷತೆಯನ್ನು ಅಧ್ಯಕ್ಷರೇ ವಹಿಸತಕ್ಕದ್ದು. ಈ ಉಪಸಮಿತಿಗಳ ನಡವಳಿಕೆಗಳನ್ನು ಪ್ರತ್ಯೇಕ ಪುಸ್ತಕಗಳಲ್ಲಿ ಬರೆಯುವುದು ಮತ್ತು ಈ ಪುಸ್ತಕದಲ್ಲಿ ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಾಹಕರು ಹಾಗೂ ಹಾಜರಿದ್ದ ಸದಸ್ಯರುಗಳು ಸಹಿ ಹಾಕತಕ್ಕದ್ದು ಮತ್ತು ಇದನ್ನು ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸತಕ್ಕದ್ದು. ಈ ಸಭೆಗಳಿಗೆ ಸಭಾವಶ್ಯಕ ಸಂಖ್ಯೆ (ಕೋರಂ) ಮೂರು ಇರತಕ್ಕದ್ದು. | **ನಿರ್ದೇಶಕ ಮಂಡಳಿ**<br>**ಉಪಸಮಿತಿಗಳ ರಚನೆ :**<br>ಆಡಳಿತ ಮಂಡಳಿಯ ಅನುಕೂಲಕ್ಕಾಗಿ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಆದೇಶಿಸಿದಂತೆ ಅಧ್ಯಕ್ಷರನ್ನೊಳಗೊಂಡ ಐದು ನಿರ್ದೇಶಕರಿಗೆ ಹೆಚ್ಚಿಲ್ಲದ ಉಪಸಮಿತಿಗಳನ್ನು ಯಾವುದೇ ನಿರ್ದಿಷ್ಟ ಕಾರ್ಯಗಳನ್ನು ನಡೆಸಲು ನೇಮಿಸುವುದು. ಸದರಿ ಸಮಿತಿಯ ಸಭೆಗಳಿಗೆ ವೃತ್ತಿಪರ ನಿರ್ದೇಶಕರನ್ನು ವಿಶೇಷ ಆಹ್ವಾನಿತರನ್ನಾಗಿ ಆಹ್ವಾನಿಸಬಹುದಾಗಿರುತ್ತದೆ. ಮುಖ್ಯ ಕಾರ್ಯನಿರ್ವಾಹಕರು ಈ ಸಭೆಗಳನ್ನು ಕರೆಯುವವರಾಗಿರುತ್ತಾರೆ ಮತ್ತು ಈ ಸಭೆಗಳ ಅಧ್ಯಕ್ಷತೆಯನ್ನು ಅಧ್ಯಕ್ಷರೇ ವಹಿಸತಕ್ಕದ್ದು. ಈ ಉಪಸಮಿತಿಗಳ ನಡವಳಿಕೆಗಳನ್ನು ಪ್ರತ್ಯೇಕ ಪುಸ್ತಕಗಳಲ್ಲಿ ಬರೆಯುವುದು ಮತ್ತು ಈ ಪುಸ್ತಕದಲ್ಲಿ ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಾಹಕರು ಹಾಗೂ ಹಾಜರಿದ್ದ ಸದಸ್ಯರುಗಳು ಸಹಿ ಹಾಕತಕ್ಕದ್ದು ಮತ್ತು ಇದನ್ನು ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸತಕ್ಕದ್ದು. ಈ ಸಭೆಗಳಿಗೆ ಸಭಾವಶ್ಯಕ ಸಂಖ್ಯೆ (ಕೋರಂ) ವಿಶೇಷ ಆಹ್ವಾನಿತ / ವೃತ್ತಿಪರ ನಿರ್ದೇಶಕರನ್ನು ಹೊರತು ಪಡಿಸಿ. ಮೂರು ಇರತಕ್ಕದ್ದು. | ಉಪಸಮಿತಿಗಳಲ್ಲಿ ವಿಷಯಗಳ ಬಗ್ಗೆ ಪರಿಣಾಮಕಾರಿಯಾಗಿ ಚರ್ಚಿಸಿ ಸೂಕ್ತ ಸಲಹೆ ಪಡೆಯಲು. |

# ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ : 2ನೇ ಮಹಡಿ, ದೇವಾಂಗ ಮಾರ್ಕೆಟ್, ಜುಮ್ಮಾ ಮಸೀದಿ ರಸ್ತೆ, ಬೆಂಗಳೂರು - 560 002.
Tel. : 48521054 E-mail : textilecbl@gmail.com Website : www.tcbl.co.in

## ಬುಕ್ ಬ್ಯಾಂಕ್ ಮತ್ತು ಪ್ರತಿಭಾ ಪುರಸ್ಕಾರ

ನಮ್ಮ ಬ್ಯಾಂಕಿನ ಸದಸ್ಯರ ಮಕ್ಕಳಿಗೆ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಎರವಲು ಸೇವೆಯ ವ್ಯವಸ್ಥೆಯಲ್ಲಿ ಪಠ್ಯ ಪುಸ್ತಕ ಒದಗಿಸುವ **"ಟೆಕ್ಸ್‌ಟೈಲ್ ಸಹಕಾರಿ ವಿದ್ಯಾರ್ಥಿ ಮಿತ್ರ"** (**ಬುಕ್ ಬ್ಯಾಂಕ್**) ಸ್ಥಾಪಿಸಲಾಗಿದೆ ಹಾಗೂ ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಪುರಸ್ಕರಿಸಲು **"ಪ್ರತಿಭಾ ಪುರಸ್ಕಾರ"** ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

2021-22ನೇ ಸಾಲಿನಲ್ಲಿ ನಿಗಧಿಪಡಿಸಿದ ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುವ ಅರ್ಹ ಸದಸ್ಯರುಗಳ ಮಕ್ಕಳುಗಳಿಗೆ 2022ನೇ ನವೆಂಬರ್ ತಿಂಗಳಲ್ಲಿ ನಡೆಯಲಿರುವ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ಸಂದರ್ಭದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಏರ್ಪಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಮುಂದಿನ ದಿನಗಳಲ್ಲಿ ವೇಳಾಪಟ್ಟಿಯ ವಿವರಗಳನ್ನು ಬ್ಯಾಂಕಿನ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ಅರ್ಹ ಸದಸ್ಯರ ಮಕ್ಕಳು ಅರ್ಜಿ ಸಲ್ಲಿಸಬಹುದಾಗಿರುತ್ತದೆ.

**"ಟೆಕ್ಸ್‌ಟೈಲ್ ಸಹಕಾರಿ ವಿದ್ಯಾರ್ಥಿ ಮಿತ್ರ"ಕ್ಕೆ ವಿದ್ಯಾರ್ಥಿಗಳು 2023-2024ನೇ ಸಾಲಿಗೆ ಅರ್ಜಿ ಪಡೆಯಲು ಮತ್ತ ಅರ್ಜಿ ಸಲ್ಲಿಸುವ ದಿನಾಂಕಗಳ ವಿವರ :**

2023-2024ನೇ ಸಾಲಿಗೆ ವಿದ್ಯಾರ್ಥಿಗಳು ಬುಕ್ ಬ್ಯಾಂಕ್ ಸೌಲಭ್ಯ ಪಡೆಯಲು ಎಲ್ಲಾ ತರಗತಿಗಳಿಗೂ ದಿನಾಂಕ 15-05-2023 ರಿಂದ 30-06-2023 ರವರೆಗೆ ಬ್ಯಾಂಕಿನ ಪ್ರಧಾನ ಕಛೇರಿ ಹಾಗೂ ಶಾಖೆಗಳಲ್ಲಿ ಅರ್ಜಿಗಳನ್ನು ವಿತರಿಸಲಾಗುವುದು. ಭರ್ತಿಯಾದ ಅರ್ಜಿಗಳನ್ನು ಬ್ಯಾಂಕಿಗೆ ಸಲ್ಲಿಸಲು ಕಡೆಯ ದಿನಾಂಕದ ವಿವರ ಈ ಕೆಳಕಂಡಂತೆ ಇರುತ್ತದೆ.

| ತರಗತಿ | ಭರ್ತಿ ಮಾಡಿದ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ |
|---|---|
| 1 ಮತ್ತು 2ನೇ ವರ್ಷದ ಪಿ.ಯು.ಸಿ. | 05-07-2023 |
| ಬಿ.ಎ., ಬಿ.ಕಾಂ., ಬಿ.ಎಸ್.ಸಿ., ಸಾಮಾನ್ಯ ಪದವಿಗಳು | 15-07-2023 |
| ಡಿಪ್ಲೋಮೋ | 20-07-2023 |
| ಇಂಜಿನಿಯರಿಂಗ್ ಮತ್ತು ವೈದ್ಯಕೀಯ (ಹೊಸದಾಗಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು) | ಸಿ.ಇ.ಟಿ. ಆಯ್ಕೆ ಪ್ರಕ್ರಿಯೆ ಮುಗಿದ ದಿನಾಂಕದಿಂದ 15 ದಿನಗಳ ಒಳಗಾಗಿ |
| ಪ್ರವೇಶ ಪಡೆದು ಶಿಕ್ಷಣ ಮುಂದುವರಿಸುತ್ತಿರುವ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ವಿದ್ಯಾರ್ಥಿಗಳು | 31-08-2023 |
| ಸ್ನಾತಕೋತ್ತರ ತರಗತಿಗಳು (ಎಂ.ಎ., ಎಂ.ಕಾಂ., ಎಂ.ಎಸ್.ಸಿ., ಇತ್ಯಾದಿ | 31-08-2023 |

## 2019-20 ಹಾಗೂ 2020-21ನೇ ಸಾಲಿನಲ್ಲಿ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ







## ಆನೇಕಲ್ ಶಾಖೆಯ ಕಟ್ಟಡ ನಿರ್ಮಾಣದ ಪ್ರಗತಿಯ ನೋಟ





## ಮುಖ್ಯ ಶಾಖೆ :

1ನೇ ಮಹಡಿ, ದೇವಾಂಗ ಮಾರ್ಕೆಟ್, ಜೆ.ಎಂ. ರಸ್ತೆ, ಬೆಂಗಳೂರು – 560 002 ಫೋನ್ : 080–4852 1054

## ಶಾಖೆಗಳು :

| | | |
|---|---|---|
| ಸುಧಾಮನಗರ | : | ನಂ.16, 1ನೇ 'ಎ' ಮುಖ್ಯರಸ್ತೆ, ಸುಧಾಮನಗರ, ಬೆಂಗಳೂರು – 560 027.<br>ಫೋನ್: 4124 1207 |
| ಆಡುಗೋಡಿ | : | ನಂ.11, 3ನೇ ಅಡ್ಡರಸ್ತೆ, ಗ್ರಾಮ ದೇವತಾ ಬೀದಿ, ಆಡುಗೋಡಿ, ಬೆಂಗಳೂರು–560030.<br>ಫೋನ್: 25703133. |
| ಮಾಗಡಿ ರಸ್ತೆ | : | ನಂ.38/1, 7ನೇ ಅಡ್ಡರಸ್ತೆ, (ಅಂಜನ್ ಟಾಕೀಸ್ ಹತ್ತಿರ), ಮಾಗಡಿ ಮುಖ್ಯರಸ್ತೆ,<br>ಬೆಂಗಳೂರು – 560 023. ಫೋನ್: 23389481. |
| ಲಕ್ಷ್ಮೀನಾರಾಯಣಪುರ | : | ನಂ.14/4, 10ನೇ ಅಡ್ಡರಸ್ತೆ, ಲಕ್ಷ್ಮೀನಾರಾಯಣಪುರ, ಬೆಂಗಳೂರು–560021.<br>ಫೋನ್: 23325357. |
| ಗೊಟ್ಟಿಗೆರೆ | : | ನಂ.1562/1575/825, 2ನೇ ಅಡ್ಡರಸ್ತೆ, ವೀವರ್ಸ್ ಕಾಲೋನಿ, ಗೊಟ್ಟಿಗೆರೆ ಪೋಸ್ಟ್,<br>ಬೆಂಗಳೂರು – 560 083. ಫೋನ್: 28429403. |
| ಆನೇಕಲ್ | : | ನಂ.1/1, ತಾಲ್ಲೂಕು ಕಛೇರಿ ರಸ್ತೆ, ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಎದುರು, ಆನೇಕಲ್,<br>ಬೆಂಗಳೂರು – 562 106. ಫೋನ್: 27830603. |
| ನೆಲಮಂಗಲ | : | ಖಾತ ನಂ.3921/2661/12, 3584/2661/1, ವೀವರ್ಸ್ ಕಾಲೋನಿ, ನೆಲಮಂಗಲ ಟೌನ್,<br>ಬೆಂಗಳೂರು – 562 123. ಫೋನ್: 27722993. |
| ಉತ್ತರಹಳ್ಳಿ | : | ನಂ.56/4, 8/2, ಆಂಜನೇಯ ಸ್ವಾಮಿ ದೇವಸ್ಥಾನ ಹತ್ತಿರ, ಸುಬ್ರಮಣ್ಯಪುರ ಪೋಸ್ಟ್,<br>ಉತ್ತರಹಳ್ಳಿ, ಬೆಂಗಳೂರು – 560061. ಫೋನ್: 26394039. |
| ಯಲಹಂಕ | : | ಸೈಟ್ ನಂ, 1 ಮತ್ತು 2, ಹಳೇ ಖಾತಾ ನಂ. 109, ಬೆಳ್ಳಹಳ್ಳಿ ಮುಖ್ಯ ರಸ್ತೆ,<br>ಕೋಗಿಲು ಬಡಾವಣೆ, ಯಲಹಂಕ, ಬೆಂಗಳೂರು – 560 064. |

**BOOK-POST**

To,
Smt./Sri

*If undelivered please return to :*

**TEXTILE CO-OPERATIVE BANK LTD.**

**A.O. : Devanga Market, Jumma Masjid Road, Bengaluru - 560 002.**
**Phone : 080-4852 1054**

Ptd. @ Cauvery Ent. : 98440 81382